ಅಪರಂಜಿ

ಜುಲೈ 9 9

ತಿಳಿನಗೆಯ ಕಾರಂಜಿ



ಪ್ರಕಾಶ್

ಕು.ಗೋ.

ಟಿ.ಜಿ. ಶ್ರೀನಿಧಿ

ಆರಾರ್ಕೆ

ಗುಂಡೂರಾನಾ

ಕಮಲ ರಾಮಸ್ವಾಮಿ

ಕೃಷ್ಣ ಸುಬ್ಬರಾವ್

ನಕ್ಷತ್ರಿಕ

ಶಿವು

ಇಸ್ಮೆಯಿಲ್

ವಿ.ಎಸ್. ಇಜೇರಿ

ಪ್ರಭಾ

ಬಿ.ಎಸ್. ಪ್ರಭಾಕರ್

ಬಿಡಿ ಪ್ರತಿ: ರೂ. 5.00



ಕೊರವಂಜಿಗೆ ಲಕ್ಷ್ಮಣ್ ಬರೆದ ವ್ಯಂಗ ಚಿತ್ರ

ಶುಭಾಶಯಗಳೊಂದಿಗೆ

ವಿಜಯಾ ಮತ್ತು ಅನಂದ್ ದೇಸಾಯ್

ಆಸ್ಟಿನ್, ಟೆಕ್ಸಸ್



ಗೌರವ ಸಲಹೆಗಾರರು:
ಶ್ರೀ ಅ. ರಾ. ಸೇ.
ಶ್ರೀ ಶೇಷಗಿರಿ
ಸಂಪಾದಕ:
ಶಿವಕುಮಾರ್
ನಿರ್ವಹಣೆ:
ಬೇಲೂರು ರಾಮಮೂರ್ತಿ
ಕೃಷ್ಣ ಸುಬ್ಬರಾವ್

ಚಂದಾ ವಿವರ:

ಬಿಡಿ ಪ್ರತಿ:	ರೂ. 5.00
ವಾರ್ಷಿಕ ಚಂದಾ:	ರೂ. 60
ಹತ್ತು ವರ್ಷದ ಚಂದಾ:	ರೂ. 500

ವಿಳಾಸ: ಅಪರಂಜಿ ಕಾರ್ಯಾಲಯ, 36, 6ನೇ ಮುಖ್ಯ ರಸ್ತೆ, ಮಲ್ಲೇಶ್ವರಂ, ಬೆಂಗಳೂರು-560 003 (ಕೆಲಸದ ವೇಳೆ: ಬೆಳಿಗ್ಗೆ 8 ರಿಂದ 10 ಗಂಟೆಯವರೆಗೆ)

ಈ ಸಂಚಿಕೆಯಲ್ಲಿ

ಸಂಪುಟ 16　　ಜುಲೈ - 99　　ಸಂಚಿಕೆ - 10

ಮುದ್ರಣ: ಇಂಪ್ರೆಶನ್ಸ್, ಬೆಂಗಳೂರು - 3　　ಅಕ್ಷರ ಜೋಡಣೆ: ಒಮೇಗಾ ಲೇಸರ್‌ಟೆಕ್, ಬೆಂಗಳೂರು 27



ಅಪರಂಜಿ

(ತಿಳಿನಗೆಯ ಕಾರಂಜಿ)

ಸಂಪುಟ 16 ಜುಲೈ - 99 ಸಂಚಿಕೆ - 10

ಓಂ. ಇದು ಮೊದಲು ಆತ್ಮನೊಬ್ಬನೇ ಆಗಿತ್ತು. ಅಲುಗಾಡುವ ಮತ್ತೆ ಬೇರಾವುದೂ ಇರಲಿಲ್ಲ. ಅವನು ಲೋಕಗಳನ್ನು ಸೃಷ್ಟಿ ಮಾಡುವೆನು ಎಂದಾಲೋಚಿಸಿದನು.

- ಐತರೇಯ

ಮೊದಲು ಭಾರತವೊಂದೇ ಇತ್ತು. ಬ್ರಿಟಿಷರು ಅದರಲ್ಲಿ ಅಲುಗಾಡುವವರನ್ನು ಹುಟ್ಟುಹಾಕಿದರು. ಎರಡನ್ನು ಸೃಷ್ಟಿಸುವೆವೆಂದು ಹುನ್ನಾರ ಮಾಡಿದರು. ಕೆಲವರು ಅದನ್ನೊಪ್ಪಿದರು. ಎರಡಾಯಿತು.

ಕಾಶ್ಮೀರ ಭಾರತಕ್ಕೆ ಸೇರಿತು. ಎರಡನೆಯವರು ಇದು ನಮ್ಮದೆಂದು ಮುತ್ತಿಗೆ ಹಾಕಿದರು. ಸುಮ್ಮನಿದ್ದಿದ್ದರೆ ಬಗ್ಗುಬಡಿದಿದ್ದರೆ ಏನೂ ಆಗುತ್ತಿರಲಿಲ್ಲ. ಪಂಚಾಯ್ತಿಗೆ ಹಾಕಿದರು. ಇನ್ನೂ ಕಾಶ್ಮೀರ ಅಲುಗಾಡುತ್ತಿದೆಯೇನೋ ಎಂಬ ಭ್ರಮೆ ಬರುವಂತೆ ಎರಡನೆಯವರು ಕದ್ದು ನುಗ್ಗುತ್ತಿದ್ದಾರೆ.

ಯಾರು ಇದರ ಹಿಂದಿನವರು? ಯಾರಾದರೇನು? ಪಂಚಾಯ್ತಿಗೆ ಹಾಕಿದಾಗ ಈಗ ಭಾರತದ ಮಿತ್ರರಂತೆ ನಟಿಸುವ ಯಾರೂ ಭಾರತದ ಪಾಲಿಗಿರಲಿಲ್ಲ.

ನಾವು ನಮ್ಮನ್ನು ನೋಡಿಕೊಳ್ಳಬೇಕು. ಎರಡನೆಯವರು, ಹಿಂದೆ ಆಳುತ್ತಿದ್ದು ಈಗ ಅಳುತ್ತಿರುವವರು, ಧನ, ಅಸ್ತ್ರಗಳ ಮದದಲ್ಲಿ ತೇಲುತ್ತಿರುವವರು ಈ ಮೂವರಲ್ಲಿ ಯಾರೂ ನಮ್ಮ ಹಿತವರಿಲ್ಲ, ಇದೆಲ್ಲಾ ನಾಟಕ.

ಸತ್ಯಸಂಗತಿಯೇನೆಂದರೆ ಮೊದಲೂ ಈಗಲೂ ಆತ್ಮನೊಬ್ಬನೇ ಇದ್ದಾನೆ. ಈ ಲೋಕಗಳು ನಮ್ಮ ಕಣ್ಣಿಗೆ ಕಾಣುತ್ತಿವೆ. ನಮ್ಮನ್ನು ನಾವು ಭದ್ರವಾಗಿ ನೋಡಿಕೊಳ್ಳಬೇಕು.



೦ ಪ್ರಕಾಶ್

ಕಾರ್ಗಿಲ್‌ನ ಕಾರ್ಮೋಡಗಳು ಬೇಗ ಕರಗಲಿ ಎಂದು ಅಪರಂಜಿ ಭಗವಂತನಿಗೆ ಮೊರೆ ಇಡುತ್ತಾಳೆ!!

★★★

ದಳದ ಸಾಧನೆ; ಮನೆ ಮನೆಗೆ ಕೊಂಡೊಯ್ಯಲು ಕರೆ

- ದಿನಪತ್ರಿಕೆ

ಅಂದರೆ ನಮಗೂ ಏನಾದರೂ ದಕ್ಷಿಣೆ??

★★★

ಸಾವಿನ ದವಡೆಯಿಂದ ಮತ್ತೆ ಹಿಂದಿರುಗಿದ ನಚಿಕೇತನಿಗೆ ಅಪರಂಜಿ ಬಳಗದ ಅಭಿನಂದನೆಗಳು!

★★★

ವಾಜಪೇಯೀ ಅವರು ಪಾಕಿಸ್ತಾನದ ಜತೆ ಅಲ್ಲದೆ, ರಕ್ಷಣಾ ಸಚಿವರನ್ನೂ ಎದುರಿಸಬೇಕಾದದ್ದು ವಿಷಾದಕರ!!

★★★

ಗೋವಾದಲ್ಲಿ ಕಾಂಗ್ರೆಸ್ ಬಹುಮತ

- ಸುದ್ದಿ

'ಗೋ' ಅಂದವರು ಈಗ 'ವಾ' ಅಂದರು!!

★★★

ಕಲ್ಯಾಣ ಮಂಟಪದಲ್ಲಿ ಕಾಲೇಜು; ವರದಿಗೆ ಹೈಕೋರ್ಟ್ ಆದೇಶ

- ಸುದ್ದಿ

ಅನುಕೂಲ, ಪಾಸಾದ ತಕ್ಷಣ ಮದುವೆಯೂ ಅಲ್ಲೇ!!

★★★

''ನಾನು ಮದುವೆಯಾಗಲು ಬಯಸುವ ಗಂಡಿನಲ್ಲಿ ಅದ್ಭುತ ಗುಣಗಳ ಮಿಶ್ರಣಗಳೇ ಇರಬೇಕು''

- ಸುಶ್ಮಿತಾ ಸೇನ್

ಹಾಗೇ ಕಾಣುತ್ತೆ!!

★★★

ಚುನಾವಣೆಗೆ ನಾನೇ ಸಾರಥಿ

- ಶ್ರೀ ಪಟೇಲ್

ಕೃಷ್ಣನೇ ವಿರೋಧಪಕ್ಷದ ಸಾರಥಿಯಲ್ಲ??

★★★

ನಾನು ನೆಟ್ ಪ್ರಾಕ್ಟೀಸ್‌ನಲ್ಲಿ ಚೆನ್ನಾಗಿಯೇ ಆಡುತ್ತೇನೆ

- ಅಜರುದ್ದೀನ್

ಹೌದು, ಮೈದಾನದಲ್ಲೇ ಕಷ್ಟ!!

★★★

ರಾಜ್ಯದ 347 ಕಾಲೇಜುಗಳ ಮಾನ್ಯತೆ ರದ್ದು ಸಂಭತ

- ಪತ್ರಿಕೆ

ಸರಸ್ವತಿ ಚಿಕಿತಳಾದಳಂತೆ!!

★★★

ಲೋಳ ಲೋಳಾಯೀ...

– ಕು.ರೋ.

ನನಗೊಬ್ಬಳು ಮೊಮ್ಮಗಳಿದ್ದಾಳೆ. ಎರಡು ವಸಂತ ಕಳೆದ, ಹಾಲುಗಲ್ಲದ, ಬಟ್ಟಲುಗಣ್ಣಿನ, ತುಂಟ ನೋಟದ ಬಾಲೆ. ಕುಳಿತುಕೊಳ್ಳುತ್ತಾಳೆ, ನಿಲ್ಲುತ್ತಾಳೆ, ನಡೆಯುತ್ತಾಳೆ, ಬೀಳುತ್ತಾಳೆ, ಅಳುತ್ತಾಳೆ, ನಗುತ್ತಾಳೆ, ಮನೆ ಮಂದಿಯನ್ನೆಲ್ಲ ಮುದಗೊಳಿಸುತ್ತಾಳೆ. ಮೂರು ಚಕ್ರದ ಸೈಕಲ್ ಬಿಡುತ್ತಾಳೆ, ನಾಲ್ಕು ಚಕ್ರದ ಕಾರು ಓಡಿಸುತ್ತಾಳೆ, ರೈಲಿನ ಸಿಳ್ಳು ಹಾಕುತ್ತಾಳೆ, ಆನೆ, ಒಂಟೆ, ಕುದುರೆ, ಏರೋಪ್ಲೇನ್, ಮಂಗ, ಬೆಕ್ಕು, ಕರಡಿಗಳ ಗೊಂಬೆಗಳೊಡನೆ ಚಕ್ಕಂದವಾಡುತ್ತಾಳೆ, ಕೇರಂಬೋರ್ಡಿನ ಬಿಲ್ಲೆಯನ್ನು ಎಗರಿಸುತ್ತಾಳೆ, ಚೆಂಡು ಒದೆಯುತ್ತಾಳೆ, ಫುಗ್ಗ ಒಡೆಯುತ್ತಾಳೆ, ಸಂಗೀತಕ್ಕೆ ಸ್ವರ ಸೇರಿಸುತ್ತಾಳೆ, ನೃತ್ಯಕ್ಕೆ ಕಾಲು ಅಲ್ಲಾಡಿಸುತ್ತಾಳೆ. ಮನೆಗೆ ಯಾರಾದರೂ ಬಂದರೆ ಕೈಜೋಡಿಸಿ 'ನಮಸ್ತೆ' ಮಾಡುತ್ತಾಳೆ, ಬನ್ನಿ ಎನ್ನುತ್ತಾಳೆ. ಹೋಗುವಾಗ ಟಾಟಾ ಎನ್ನುತ್ತಾ ಕೈ ಬೀಸಿ ಹಸ್ತಾಲಾಘವ ನೀಡುತ್ತಾಳೆ. ಕಸ ಗುಡಿಸುವಾಗ ತಾನೂ ಒಂದು ಪೊರಕೆ ತಂದು ನೆಲಕ್ಕೆ ಬಡಿಯುತ್ತಾಳೆ, ನೆಲ ಒರಸುವಾಗ ತಾನೂ ಒಂದು ಒಳ್ಳೆಯ ಬಟ್ಟೆಯನ್ನು ತಂದು ನೀರು ಚೆಲ್ಲಿ ತನ್ನ ಅಂಗಿಯನ್ನು ಒದ್ದೆ ಮಾಡಿಕೊಳ್ಳುತ್ತಾಳೆ, ನೀರಿನ ಬಕೇಟನ್ನು ಅಡಿಮೇಲು ಮಾಡಿ ಅದರ ಮೇಲೆ ನಿಂತು ಕುಣಿಯುತ್ತಾಳೆ. ಏಣಿ ಮೆಟ್ಟಿಲನ್ನು ಒಂಬತ್ತು, ಏಳು, ಎಂಟು, ಎರಡು ಎನ್ನುತ್ತಾ ಹತ್ತುತ್ತಾಳೆ. ಎಲ್ಲಿ ಹೋಗುತ್ತಾಳೆ, ಎಲ್ಲಿ ಬರುತ್ತಾಳೆ, ಎಲ್ಲಿ ಬೀಳುತ್ತಾಳೆ, ಎಲ್ಲಿ ಏಳುತ್ತಾಳೆ ಎಂಬುದಿಲ್ಲ. ಕೈಯಿಂದ ಕೈಯಿಗೆ, ಮೂಲೆಯಿಂದ ಮೂಲೆಗೆ ಜಿಗಿದಾಡುವ ಈ ಮುಗ್ಧ ತುಂಟ ಮಗು ಮನೆಯಲ್ಲೊಂದು ಜೀವನದಿಯಾಗಿ ಹರಿದಾಡುತ್ತಾಳೆ. ಪ್ರಾಣವಾಯುವಾಗಿ ಸುಳಿದಾಡುತ್ತಾಳೆ. ಅವಳ ಗೆಜ್ಜೆಯ ನಾದ, ಬಳೆಯ ಕಿಣಿ ಕಿಣಿ, ತೊದಲು ಮಾತು, ಹಾಡು, ಅಳು, ಕಿರಿಚಾಟ ಎಲ್ಲವೂ ಕಿವಿದುಂಬುತ್ತದೆ. ಅವಳ ನಲಿದಾಟ ಕಣ್ತುಂಬುತ್ತದೆ. ಇಡೀ ಮನೆಯ ವಾತಾವರಣವೇ ಅವಳ ಉಪಸ್ಥಿತಿಯಿಂದ ಜೀವ ತುಂಬುತ್ತದೆ.

ಬ್ರಾಹ್ಮೀ ಮುಹೂರ್ತಕ್ಕೆ ಇವಳ ಎಚ್ಚರ. 'ಅಮ್ಮಾ' ಎಂದು ಅಮ್ಮನನ್ನು ಕರೆದು ಎಚ್ಚರಿಸುತ್ತಾಳೆ. ಮೈ ಮುರಿಯುತ್ತಾಳೆ, ಆಕಳಿಸುತ್ತಾಳೆ. ಹೊದಿಕೆ ಸರಿಸಿ ಮೇಲೇಳುತ್ತಾಳೆ. ಇವಳ ಕರೆಯಿಂದ ಅಮ್ಮನೊಟ್ಟಿಗೆ ಉಳಿದವರಿಗೂ ಎಚ್ಚರ. ಹೊದಿಕೆಯೊಳಗೆ ಇನ್ನು ಎಚ್ಚರದಲ್ಲೇ ಮಲಗಿರುವ ಅಜ್ಜನ ಬಳಿ ಬಂದು 'ಅಜ್ಜಾ' ಎನ್ನುತ್ತಾ ಹೊದಿಕೆ ಸರಿಸುತ್ತಾಳೆ, 'ಅಜ್ಜಾ ನಮಸ್ಕಾರ' ಎಂದು ಕೈ ಜೋಡಿಸುತ್ತಾಳೆ. ಅಮ್ಮನ ಸೊಂಟವೇರಿ ಅಮ್ಮನೊಟ್ಟೀ ಹಲ್ಲು ಉಜ್ಜುವ ಶಾಸ್ತ್ರವನ್ನೂ

ಮುಗಿಸುತ್ತಾಳೆ. ಬಾಯಿಯಲ್ಲಿ ನೀರು ಹಾಕಿ ಪುಚಿಕ್ ಪುಚಿಕ್ ಎಂದು ಉಗುಳುತ್ತಾಳೆ 'ಹಾಲು ಬೇಕು' ಎನ್ನುತ್ತಾಳೆ ಅಜ್ಜ ಚಾ ಕುಡಿಯುವಾಗ ತನ್ನದೇ ಪುಟ್ಟ ಲೋಟ ಹಿಡಿದುಕೊಂಡು ಬಂದು 'ಅಜ್ಜಾ ಚಾ ಬೇಕು' ಎಂದು ತುಂಟ ನಗೆಯಾಡುತ್ತಾ ಅಜ್ಜನಿಂದ ಒಂದು ಗುಟುಕು ಚಾ ಪಡೆದು ಕುಡಿಯುತ್ತಾಳೆ, 'ಒಳ್ಳೆದುಂಟು' ಎಂದು ಬಾಯಿ ಚಪ್ಪರಿಸುತ್ತಾಳೆ, ರಿಮೋಟ್ ಕಂಟ್ರೋಲಿನ ಗುಂಡಿಗಳನ್ನು ಒತ್ತಿ ಟಿ.ವಿ. ಪರದೆ ವೀಕ್ಷಿಸುತ್ತಾಳೆ. ಸ್ವಲ್ಪ ಶಾಸ್ತ್ರೀಯ ಸಂಗೀತಕ್ಕೆ ಹೋಲುವ ಹಾಡು, ನೃತ್ಯವಿದ್ದರೆ ನೋಡುತ್ತಾಳೆ ನೆಲ ಒದೆಯುವ, ತಲೆ ಸಿಡಿಸುವ ಕುಣಿತ ಹಾಡು ಇದ್ದರೆ 'ಒಳ್ಳೆಯದಿಲ್ಲ' ಎನ್ನುತ್ತಾ ಟಿ.ವಿ. ಆಫ್ ಮಾಡುತ್ತಾಳೆ. ದನ 'ಅಂಬೇ' ಎಂದೊಡನೆ 'ಅಂಬೆಗೆ ಹುಲ್ಲು ಹಾಕು' ಎಂದು ಮಾಮನನ್ನು ಒತ್ತಾಯಿಸುತ್ತಾಳೆ. ಸ್ನಾನ ಮಾಡಿಸಲು ಅಂಗಿ ತೆಗೆದರೆ ನಾಚಿಕೆ ಬೇರೆ. ಮೈ ಮಂಚೆಗೆ ಎಣ್ಣೆ ತಿಕ್ಕುವಾಗ ತನ್ನ ಎರಡೂ ಕೈಗಳನ್ನ ಮೇಲೆತ್ತಿ 'ಶಕ್ತಿಮಾನ್' ಎನ್ನುತ್ತಾ ತನ್ನ ತೋಳಿನ ಸ್ನಾಯುವನ್ನು ತೋರಿಸಲು ಪ್ರಯತ್ನಿಸುತ್ತಾಳೆ, ಸ್ನಾನ ಮಾಡುವಾಗ ಸ್ವಲ್ಪ ಹಟ. ತಾನೇ ಸ್ನಾನ ಮಾಡುತ್ತೇನೆ, ಸಾಬೂನು ಹಚ್ಚಿಕೊಳ್ಳುತ್ತೇನೆ, ತಲೆ ಒರಸಿಕೊಳ್ಳುತ್ತೇನೆ ಎಂಬ ಹಟ. ಹೇಗೋ ಪ್ರತಿನಿತ್ಯ ಸ್ನಾನದ ಶಾಸ್ತ್ರ ಮುಗಿಯುತ್ತದೆ. ಸ್ನಾನ ಆದಮೇಲೆ ಪೌಡರ್ ಹಾಕಬೇಕು ಮೈಯೆಲ್ಲ 'ಪಮ್ಮಳ ಪಮ್ಮಳ' (ಪರಿಮಳ) ಆಗಬೇಕು. ಅವಳೇ ಆರಿಸಿದ ಅಂಗಿ ಧರಿಸಬೇಕು. ಹಣೆಯಲ್ಲಿ ಬೊಟ್ಟು ಇಡಬೇಕು. ಎಲ್ಲ ಅಲಂಕಾರ ಆದಮೇಲೆ ಕನ್ನಡಿಯ ಮುಂದೆ ನಿಂತು ವೈಯ್ಯಾರ ಮಾಡಬೇಕು. ತಲೆ ಬಾಚಿದ್ದು ಸರಿಯಾಗಿಲ್ಲ, ಬೊಟ್ಟು ವಾರೆಯಾಗಿದೆ ಇತ್ಯಾದಿ ದೂರುಗಳು ಬೇರೆ.

ಮನೆಯಲ್ಲಿ ಬೆಳಗ್ಗಿನ ಗಡಿಬಿಡಿ. ಶಾಲಾ ಕಾಲೇಜುಗಳಿಗೆ ಹೋಗುವವರು, ಆಫೀಸಿಗೆ ಹೋಗುವವರು, ಫ್ಯಾಕ್ಟರಿಗೆ ಹೋಗುವವರು ಎಲ್ಲ ಅವರವರದ್ದೆ ಗಡಿಬಿಡಿಯಲ್ಲಿರುವಾಗ ಎಲ್ಲರಿಂದಲೂ ಕೈ ತುತ್ತು ಪಡೆದು ಕೆನ್ನೆಗೆ ಮುತ್ತನ್ನೂ ಸಂಪಾದಿಸುತ್ತಾಳೆ. ಬಾಟಲಿಯಲ್ಲಿ ಹಾಲನ್ನು ಚೀಪುತ್ತಾ ಹೋಗುವವರಿಗೆಲ್ಲಾ 'ಟಾಟಾ' ಮಾಡಿ 'ಬೇಗ ಬನ್ನಿ' ಎಂದು ಹೇಳಿದರೂ ಕೊನೆಗೆ 'ನಾನೂ ಬರುತ್ತೇನೆ' ಎನ್ನುತ್ತಾ ಕಾಲಿಗೆ ಚಪ್ಪಲಿ ಸಿಕ್ಕಿಸಿ ಹೆಗಲಿಗೆ ಚೀಲ ನೇತಾಡಿಸಿ ಹೊರಡುವುದೂ ಇದೆ, ಏನೇನೋ ನೆವ ಹೇಳಿ ಎಲ್ಲರೂ ಹೋದಮೇಲೆ 'ನನ್ನನ್ನು ಬಿಟ್ಟೇ ಹೋದರು' ಎಂದು ಅಳುಮೋರೆ ಮಾಡುತ್ತಾ ನಿಲ್ಲುತ್ತಾಳೆ. ಹೇಗಿದ್ದರೂ ಅವಳಿಗೆ ಶಾಲೆಗೆ, ಆಫೀಸಿಗೆ ರಜೆ ತಾನೇ! ನೀನು ಹೋಗಿಲ್ಲವಾ ಎಂದು ಕೇಳಿದರೆ 'ನನಗೆ ರಜೆ' ಎಂಬ ಸಿದ್ಧ ಉತ್ತರ ಅವಳದ್ದು.

ಹಸಿವಾದಾಗ ಊಟ ಬೇಕೆಂದೋ, ಬಾಯಾರಿದಾಗ ಹಾಲು, ನೀರು ಬೇಕೆಂದೋ ಸನ್ನೆ ಮಾಡಿ ತನಗೆ ಬೇಕಾದ್ದನ್ನು ಪಡೆಯುತ್ತಾಳೆ, ಒತ್ತಾಯ ಮಾಡಿ ಯಾವುದನ್ನು ತಿನ್ನಿಸುವಂತಿಲ್ಲ, ಕುಡಿಸುವಂತಿಲ್ಲ. ಅಜ್ಜ ಪೂಜೆ ಮಾಡುವಾಗ

ಅಜ್ಜನ ತೊಡೆಯ ಮೇಲೆಯೇ ಕುಳಿತು ಕಣ್ಣುಕಟ್ಟಿನ ಪೂಜೆಯನ್ನು ವೀಕ್ಷಿಸುತ್ತಾಳೆ, ಆರತಿ ಎತ್ತುವಾಗ ಗಂಟೆ ಬಾರಿಸುತ್ತಾಳೆ, ದೇವರಿಗೆ 'ಜಾಮೀ' ಮಾಡುತ್ತಾಳೆ. ಒಳ್ಳೆ ಬುದ್ಧಿಕೊಡಿ, ವಿದ್ಯೆಕೊಡಿ, ಆರೋಗ್ಯ ಕೊಡಿ, ಐಶ್ವರ್ಯಕೊಡಿ ಎಂದು ಅವಳ ಮಾತಿನಲ್ಲೇ ಪ್ರಾರ್ಥಿಸುತ್ತಾಳೆ, ತೀರ್ಥಕ್ಕೆ ಕೈ ನೀಡುತ್ತಾಳೆ, ಸಮಯಾ ಸಮಯವಿಲ್ಲದೆ ಕುಂಕುಮ, ಅರಿಸಿನ, ಶೇಡಿಯ ಬಟ್ಟಲು ಹಿಡಿದು ಹೊಸ್ತಿಲು ಬರೆದು ಅಜ್ಜನಿಂದಲೂ ಬಲವಂತದಿಂದ ನಮಸ್ಕಾರ ಮಾಡಿಸುತ್ತಾಳೆ.

ಸುಮಾರು ಒಂಭತ್ತು ಗಂಟೆಯ ನಂತರ ಮನೆಯಲ್ಲಿ ಅಜ್ಜ ಮೊಮ್ಮಗಳು ಇಬ್ಬರೇ! ತೋಟದಲ್ಲಿ, ಹಟ್ಟಿಯಲ್ಲಿ 'ಮಾಮ'ನ ಕೆಲಸ ನಾಗುತ್ತಾ ಇರುತ್ತದೆ, ಆಗೊಮ್ಮೆ ಈಗೊಮ್ಮೆ ವಾಹನಗಳ ಸದ್ದು ಕೇಳಿ ಬರುತ್ತದೆ. ಅವಳ ಇನ್ನೊಬ್ಬ ಅಜ್ಜನ ಕಾರು ಬಂದಾಗ ಅದರ ಶಬ್ದದಲ್ಲೇ ಗುರುತಿಸಿ 'ಕಾರಜ್ಜ ಬಂದರು' ಎಂದು ಹೊರಗೆ ಓಡುತ್ತಾಳೆ. ಅವರು ಬಂದರಂತೂ ಕುಶಿಯೋ ಕುಶಿ. ಕಾರಜ್ಜನ ಕಾರಿನಲ್ಲಿ ಒಂದು ಪುಕ್ಕಟ್ಟೆ ಟ್ರಿಪ್ ಆದಾಗಲೇ ಅವಳಿಗೆ ಸಮಾಧಾನ. ಮಣಿಪಾಲಕ್ಕೋ ಉಡುಪಿಗೋ ಹೋಗಿ ಎಂಡ್‌ಪಾಯಿಂಟ್, ಆನೆ, ಸರೋವರದ ನೀರು, ರಥ ಬೀದಿಯ ರಥ, ಜನತಾದ ಐಸ್‌ಕ್ರೀಂ, ಅಂಗಡಿಯ ಪುಗ್ಗ ಎಲ್ಲ ಮುಗಿಸಿ ಕಾರಜ್ಜನ ಕಾರಿನಲ್ಲಿ ಸುತ್ತಿ ಬಂದು ನಿದ್ರೆ ಮಾಡುತ್ತಾಳೆ. ಹಗಲು ಮೂರುಗಂಟೆ ನಿದ್ರೆ ಮಾಡಿದರೆ ಆದಿನ ಉತ್ಸಾಹಭರಿತಳಾಗಿ ಏನೂ ಹಠ ಮಾಡದೆ ತನ್ನ ವಾಡಿಗೆ ತಾನು ತನ್ನ ಆನೆ ಕುದುರೆ ಸಾರೋಟಿನೊಂದಿಗೆ, ಫೋನಿನಲ್ಲಿ ಸಂಭಾಷಿಸುತ್ತಾ, ಟಿ.ವಿ. ವೀಕ್ಷಿಸುತ್ತಾ, ಟೇಪ್‌ರೆಕಾರ್ಡರ್ ಆಲಿಸುತ್ತಾ ತನ್ನ ಚಟುವಟಿಕೆಗಳನ್ನು ಮುಂದುವರಿಸುತ್ತಾಳೆ.

ತಲೆಗೂದಲು ಹಣ್ಣಾದವರೆಲ್ಲ ಅಜ್ಜ ಅಜ್ಜಿ. ಸಣ್ಣ ಮಕ್ಕಳು ಅಕ್ಕ, ಅಣ್ಣ. ನಡು ವಯಸ್ಸಿನವರು ಮಾಮ, ಆಂಟಿ. ಟ್ಯೂಷನ್ ಹೇಳಿಕೊಡುವ ಚಿಕ್ಕಮ್ಮ 'ಮಿಸ್' ಮಲೆಯಾಳಿ ಹುಡುಗಿಯರು ಚೇಚಿಗಳು. ಗೇಟಿನ ಬಳಿ ನಿಂತರೆ ಇವಳನ್ನು ಮಾತನಾಡಿಸದೆ ಹೋಗುವವರೇ ಇಲ್ಲ. ನಿತ್ಯ ಸಂಚಾರಿಗಳೆಲ್ಲ ಇವಳಿಗೆ ಪರಿಚಿತರೇ. ಬೋಳುಮಂಡೆ ಕಣ್ಣಿಗೆ ಬಿದ್ದರೆ 'ಬೋಳು ಮಂಡೆ' ಎಂದೇ ಕರೆಯುತ್ತಾಳೆ, ಕಾಲಿಗೆ ಚಪ್ಪಲಿ ಇಲ್ಲದೆ ನಡೆಯುವವರನ್ನು ಕಂಡರೆ ಆಶ್ಚರ್ಯ. 'ಚಪ್ಪಲಿ ಹಾಕಿಲ್ಲ' ಎನ್ನುತ್ತಾಳೆ. ಅಜ್ಜ ಮನೆಯೊಳಗೆ ಮಾತ್ರ ಚಪ್ಪಲಿ ಇಲ್ಲದೆ, ಪಂಚೆ ಬನಿಯನ್ನಿನಲ್ಲಿ ಇರಬಹುದು. ಹೊರಗೆ ಹೋಗಬೇಕಾದರೆ ಪ್ಯಾಂಟ್ ಹಾಕಲೇಬೇಕು, ಚಪ್ಪಲಿ ಮೆಟ್ಟಲೇ ಬೇಕು - ಇಲ್ಲದಿದ್ದರೆ ಅವಳ ಮರ್ಯಾದೆಗೆ ಧಕ್ಕೆ ಬಂದಂತೆ. ತೋಟದಲ್ಲಿ ಬರಿಗಾಲಲ್ಲಿ ತನ್ನ ಕಂಡರೆ ತನ್ನ ಚಪ್ಪಲಿ ತಂದು ಕಾಲಿಗೆ ಕೊಡಿಸುತ್ತಾಳೆ. ಪಂಚೆ ಎತ್ತಿಕಟ್ಟುವಂತಿಲ್ಲ. ಕಾಲು ಮುಚ್ಚುವ ಹಾಗೆಯೇ ಇರಬೇಕು. ತಾನು ಹೇಳಿದ ಹಾಗೆ ಕುಣಿಯುವ ಅಜ್ಜನ ಬಗ್ಗೆ ಅವಳಿಗೆ ತುಂಬ

ಪ್ರೀತಿ. 'ನನ್ನ ಮುದ್ದು ಅಜ್ಜ' ಎಂದು ಅಪ್ಪಿ ಹಿಡಿದುಕೊಳ್ಳುವುದೂ ಇದೆ. ಅಜ್ಜನ ಬೆನ್ನಮೇಲೆ, ಹೆಗಲ ಮೇಲೆ ಸವಾರಿ ಮಾಡುವುದೂ ಇದೆ.

ರಜಾ ದಿನಗಳನ್ನು ಬಿಟ್ಟರೆ ಉಳಿದ ದಿನಗಳಲ್ಲಿ ಮಧ್ಯಾಹ್ನ ಊಟಕ್ಕೆ ಅಜ್ಜ ಮೊಮ್ಮಗಳು ಇಬ್ಬರೇ. ಅವಳದೇ ಪುಟ್ಟ ಬಟ್ಟಲು. ತಿನ್ನುವುದು ನಾಲ್ಕು ತುತ್ತು ಅನ್ನ ಮಾತ್ರ, ಉಪ್ಪು, ತುಪ್ಪ, ಮೊಸರು ಎಲ್ಲವೂ ಬೇಕು, ಜೊತೆಯಲ್ಲಿ ಅಜ್ಜನೂ ಊಟಮಾಡಬೇಕು, ಒಂದು ದಿನ ಊಟದ ಹೊತ್ತಿನಲ್ಲಿ ಮಲಗಿದ್ದಳೆಂದು ನಾನೊಬ್ಬನೇ ಊಟ ಮುಗಿಸಿದೆ. ನಿದ್ರೆಯಿಂದ ಎಚ್ಚೆತ್ತ ಅವಳಿಗೆ ಊಟಕ್ಕೆ ಬಡಿಸಿದರೆ ನಾನೂ ಕುಳಿತು ಉಣ್ಣಲು ಒತ್ತಾಯ. ಏನು ಮಾಡುವುದು ಅವಳೊಟ್ಟಿಗೆ ಆ ದಿನ ಎರಡನೇ ಬಾರಿ ಊಟ ಮಾಡಬೇಕಾಯಿತು. ಒಂದು ದಿನ ತೊಟ್ಟಿಲಲ್ಲಿ ಮಲಗಿದಳು - ಜೋಜೋ ಮಾಡಿ ಎಂದಳು - ನೀವೂ ಮಲಗಿ ತೊಟ್ಟಿಲಲ್ಲಿ ಎಂದಳು. ಮಗುವಿನೊಟ್ಟಿಗೆ ಮಗುವಾಗಿ ತೊಟ್ಟಿಲಲ್ಲಿ ಮುದುಡಿ ಮಲಗಿ ಕೈಕಾಲು ನೋವು ಮಾಡಿಕೊಂಡೆ - ಆದರೂ ಅವಳಿಗೆ ಸಮಾಧಾನವಾಯಿತಲ್ಲಾ. ಅದೇ ನನಗೂ ಸಮಾಧಾನ.

ಪೇಪರ್ ಬಂದಾಗ, ಪೋಸ್ಟ್ ಬಂದಾಗ ಗೇಟಿನ ಬಳಿ ಚಪ್ಪಲಿ ಮೆಟ್ಟಿ ಓಡುತ್ತಾಳೆ, ಮನೆತನ, ಜನನಿ, ಮಾಯಾಮೃಗ ವೀಕ್ಷಿಸುವಾಗ ವೀಕ್ಷಕ ವಿವರಣೆಯನ್ನು ನೀಡಬೇಕಾಗುತ್ತದೆ. 'ಎಂತದಂತೆ, ಎಂತದಂತೆ' ಎಂದು ಕೇಳುತ್ತಾಲೇ ಇರುವಾಗ ಏನಾದರೂ ಹೇಳುತ್ತೇನೆ, 'ಒಂದೂರಲ್ಲಿ ಒಂದು ಅಜ್ಜಿ ಇತ್ತು' ಎಂದು ಹೇಳಲು ಶುರು ಮಾಡಿದ ಕಥೆ ಇನ್ನೂ ಮುಗಿಯಲಿಲ್ಲ.

ನಮ್ಮ ಬಂಧುಗಳ ಪರಿಚಯ ಮರೆಯೋಲ್ಲ, ಕಾರಜ್ಜ, ಮಂಗಳೂರಜ್ಜ, ಉಪ್ಪಿನಂಗಡಿ ಅಜ್ಜ, ಆಚೆಮನೆ ಅಜ್ಜ, ಹೈದರಾಬಾದ್ ಅಜ್ಜ ಎನ್ನುತ್ತಾ ಅವರ ಮಕ್ಕಳು ಮರಿಗಳನ್ನೆಲ್ಲಾ ಜ್ಞಾಪಿಸಿಕೊಳ್ಳುತ್ತಾಳೆ, ಅಡಿಕೆ ತೋಟದಲ್ಲಿ ಅಡಿಕೆ ಹೆಕ್ಕಿದ್ದಾಳೆ, ಹೋಟೆಲುಗಳಲ್ಲಿ ಮಸಾಲೆ ದೋಸೆ ತಿಂದಿದ್ದಾಳೆ, ಚಾ ರುಚಿ ನೋಡಿದ್ದಾಳೆ, ಐಸ್‌ಕ್ರೀಂ ಚೀಪಿದ್ದಾಳೆ, ಸಮುದ್ರದ ತೆರೆಗಳೊಡನೆ ಆಡಿದ್ದಾಳೆ. ಮೂಡುವ ಚಂದ್ರ ಮುಳುಗುವ ಸೂರ್ಯರನ್ನು ನೋಡಿ ಕುಣಿದಾಡಿದ್ದಾಳೆ. ಹೂವು ಹಣ್ಣುಗಳತ್ತ ಆಕರ್ಷಿತಳಾಗಿದ್ದಾಳೆ - ಎಲ್ಲವೂ ಬೇಕು - ಎಲ್ಲರೂ ಬೇಕು ಈ ನಿಷ್ಕಪಟ, ನಿಷ್ಕಳಂಕ ಮುದ್ದು ಬಾಲೆಗೆ, ಈಗ ನನಗೆ ಇನ್ನೊಬ್ಬ ಮೊಮ್ಮಗ ಬಂದಿದ್ದಾನೆ. ಆ 'ಪುಟ್ಟ'ನಿಗೂ ಆಗಾಗ್ಗೆ ಫೋನ್ ಮಾಡಬೇಕು - ಅವಳೇ ಫೋನಿನಲ್ಲಿ ಕೇಳುತ್ತಾಳೆ 'ಪುಟ್ಟಾ ಹೇಗಿದ್ದಿ?'

ಮೊನ್ನೆ ಒಂದು ದಿನ ಪುಟ್ಟಿಯೊಟ್ಟಿಗೆ ನಾನೂ ಮಲಗಿದ್ದೆ ಎಂದಿನಂತೆ. ಅವಳಿಗೆ ನಿದ್ರೆ ಬಂದ ಮೇಲೆ ನಾನು ಎದ್ದು ಏನಾದರೂ ಮಾಡುವ ಕ್ರಮವಿತ್ತು ಆದರೆ ಆದಿನ ನನಗೆ ನಿದ್ರೆ ಬಂದದ್ದೇ ತಿಳಿಯಲಿಲ್ಲ "ಅಜ್ಜಾ ಅಜ್ಜಾ" ಎಂದು ಜೋರಾಗಿ

ಕೂಗುತ್ತಾ ಅಳುವ ಶಬ್ದ ಕೇಳಿಸಿದ ಮೇಲೆಯೇ ನನಗೆ ಎಚ್ಚರ, ಕಣ್ಣುಬಿಟ್ಟು ನೋಡುತ್ತೇನೆ ನೋಡುವುದೇನನ್ನು?

ಗೊಂಬೆಗಳೆಲ್ಲಾ ಹಾಲ್‌ನಲ್ಲಿ ಚೆಲ್ಲಾ ಪಿಲ್ಲಿಯಾಗಿ ಹರಡಿದ್ದವು. ಟೇಪ್‌ರೆಕಾರ್ಡರ್ ಕಿರಿಚುತ್ತಿತ್ತು. ಶೆಲ್ಫ್‌ನಲ್ಲಿದ್ದ ದೊಡ್ಡ ದೊಡ್ಡ ಲೇಖಕರೆಲ್ಲಾ ಧರಾಶಾಹಿಗಳಾಗಿದ್ದರು. ಬಚ್ಚಲಿನ ನಲ್ಲಿಯಲ್ಲಿ ನೀರು ಹರಿದು ಹೋಗುತ್ತಿತ್ತು, ಅಡುಗೆ ಮನೆ ಬಚ್ಚಲು ಮನೆಯಾಗಿತ್ತು. ಮಂಚದ ಬಳಿಯಿದ್ದ ಕಿಟಕಿಯ ಸರಳಿಗೆ ಹಾಕಿಟ್ಟು ಹತ್ತಿ ಗೋದ್ರೇಜ್ ಕಪಾಟಿನ ಮೇಲೆ ಹತ್ತಿ ಅದರ ಮೇಲಿದ್ದ ಸಾದಿಲ್ವಾರು ವಸ್ತುಗಳನ್ನೆಲ್ಲ ಕೆಳಗೆ ಚೆಲ್ಲಿ ಪುನಃ ಕೆಳಗೆ ಇಳಿಯಲಾರದೆ ನಮ್ಮ ಪುಟ್ಟಿ ಅಲ್ಲೇ ಕುಳಿತು ಅಜ್ಜನನ್ನು ಕರೆಯುತ್ತಿದ್ದಳು. ಗಂಟೆ ಐದಾಗಿರಬಹುದು. ಹೊರಗೆ ಹೋದವರೆಲ್ಲ ಮನೆಗೆ ಬರುವ ಸಮಯ ಕಪಾಟಿನ ಮೇಲಿನಿಂದ ವಳನ್ನು ಕೆಳಗಿಳಿಸಿದೆ ಪ್ಯಾಂಟ್ ಹಾಕು ಪ್ಯಾಂಟ್ ಹಾಕು ಎಂದು ನನ್ನ ಕೈ ಹಿಡಿದು ಬೆಡ್‌ರೂಮಿಗೆ ಎಳೆದೊಯ್ದಳು. ಉಪ್ಪಿಗೆ (ಉಡುಪಿಗೆ) ಹೋಗುವ ಎಂದಳು. ಮನೆಯ ವಾತಾವರಣವನ್ನು ನೋಡಿ, ಪುಟ್ಟಿ ಮಾಡಿದ ಅವಾಂತರಗಳನ್ನು ವೀಕ್ಷಿಸಿ, ಮುಂದೆ ಆಗಬಹುದಾದ ಅವಾಂತರಗಳನ್ನು ನೆನೆದು ನಾನು ಕೂಡಲೇ ಪ್ಯಾಂಟ್ ಶರ್ಟ್ ಹಾಕಿಕೊಂಡು, ಚೀಲ ಹಿಡಿದು, ಪುಟ್ಟಿಯನ್ನು ಎತ್ತಿಕೊಂಡು ಬಾಗಿಲ ಬಳಿ ಬರುವಾಗ ಪುಟ್ಟಿಯ ಅಮ್ಮ ಮನೆಗೆ ಬಂದಳು. 'ಅಮ್ಮಾ ಟಾಟಾ - ನಾನು ಅಜ್ಜ ಉಪ್ಪಿಗೆ ಹೋಗಿ ಬರ್ತೇವೆ ಕೂಗಬೇಡ' ಎಂದು ಅಮ್ಮನಿಗೆ ಹೇಳುತ್ತಿದ್ದಂತೆಯೇ ನಾನು ಪುಟ್ಟಿಯನ್ನು ಎತ್ತಿಕೊಂಡು ಬಸ್ ಸ್ಟ್ಯಾಂಡಿನತ್ತ ಹೆಜ್ಜೆ ಹಾಕಿದೆ ಹೇಗಿದ್ದರೂ ನಾವು ಹಿಂದಿರುಗುವಾಗ ಮನೆ 'ಕ್ಲೀನ್' ಆಗಿರುತ್ತದಲ್ಲಾ!

★★★

ಕೇಳಿಸಿಕೊಂಡದ್ದುಃ

'ಇದೆಲ್ಲಾ ಏನ್ಸಾ?'

'ಗುಲಾಮಗಿರಿ ಸಾ'

'ನಾವು ಇನ್ನೊಬ್ಬರ ಗುಲಾಮರು ಹೇಗಾದವು ಸಾ?'

'ಹೀಗೇ ಸಾ'

'ನಾವು ಸ್ವಾಭಿಮಾನಿಗಳಲ್ಲವೇ ಸಾ?'

'ಹೌದು ಸಾ. ಏನ್ಮಾಡ್ತೀರಿ, ಹಿಂದೆ ಅನೇಕರು ಇದ್ದರು ಸಾ. ಈಗಲೂ ಇದ್ದಾರೆ ಸಾ. ಆದರೆ ತಮ್ಮ ಲಾಭಕ್ಕಾಗಿ ದೇಶವನ್ನು ಮಾರಿಕೊಳ್ಳುವವರು ಹಿಂದೆಯೂ ಇದ್ದರು ಈಗಲೂ ಇ......'



ವರ್ಲ್ಡ್‌ಕಪ್ ಮುಗಿದ ಮೇಲೆ
ಈ ಜನಕ್ಕೆ ನಮ್ಮ ಮ್ಯಾಚೇ ಗತಿ !

"ಇಯರ್ 2002 ಪ್ರಾಬ್ಲಮ್"

– ಟಿ.ಜಿ. ಶ್ರೀನಿಧಿ

"ಇದೇನಪ್ಪಾ ಇದು! ಇಯರ್ 2000 ಪ್ರಾಬ್ಲಮ್ ಅನ್ನೋದ್ರ ಬದ್ಲು ಇಯರ್ 2002 ಪ್ರಾಬ್ಲಮ್ ಅಂತಾ ಇದ್ಯಲ್ಲ! ಅಪರಂಜೀಲೂ ಮುದ್ರಾರಾಕ್ಷಸನ ಹಾವ್ಳಿ ಶುರೂ ಆಯ್ತಾ?" ಅಂತ ಕೇಳ್ಬೇಡಿ. ಖಂಡಿತಾ ಇದು ಮುದ್ರಾರಾಕ್ಷಸನ ಹಾವ್ಳಿ ಅಲ್ಲ, ನನ್ನ ಹೊಸ ಸಂಶೋಧನೆ "Year 2002 problem ಅಥ್ವಾ y2002k problem"!

ಅರ್ಥ ಆಗ್ಲಿಲ್ವಾ? ಪರ್ವಾಗಿಲ್ಲ. ಮುಂದೆ ಓದಿ

ನೀವೆಲ್ರೂ ಲೈಬ್ರರಿಗಳಲ್ಲಿ, ಕಛೇರಿಗಳಲ್ಲಿ ದಿನಾಂಕವನ್ನು ಹಾಕಲು ಬಳಸೋ "ಮುದ್ರೆ"ಗಳನ್ನ ನೋಡಿರ್ತೀರೋದು ("ಮುದ್ರೆ" ಅಂದ್ರೆ Rubber stamp ಕಣ್ರೀ, ಅಷ್ಟೂ ಗೊತ್ತಾಗ್ಲಿಲ್ವಾ?) ಆದ್ರೆ ಸಾಮಾನ್ಯವಾಗಿ ಈ ರಬ್ಬರ್ ಸ್ಟಾಂಪ್‌ಗಳಲ್ಲಿ 1990 ರಿಂದ 2001ನೇ ಇಸ್ವಿಯವರೆಗೆ 12 ವರ್ಷಗಳ ದಿನಾಂಕಗಳು ಮಾತ್ರ ಇರೋದನ್ನ ನೀವು ನೋಡಿಲ್ಲಾ ಅಂತ ಕಾಣತ್ತೆ. ಇರ್ಲಿ, ಈಗ 2001ನೇ ಇಸ್ವಿ ಡಿಸೆಂಬರ್ 31ರ ವರ್ಗೆ ಈ ರಬ್ಬರ್ ಸ್ಟಾಂಪ್‌ಗಳ್ನೇ ಬಳಸಿ ದಿನಾಂಕಗಳ್ನ ಮುದ್ರಿಸ್ತಾರೆ ಅಂತ ಇಟ್ಕೊಳಿ. ಆನಂತರ?

ನಮ್ಮ ದೇಶದ ಎಲ್ಲಾ ಕಛೇರಿಗಳು ಹಾಗೂ ಗ್ರಂಥಾಲಯಗಳಲ್ಲಿ ಇಂತಹ ರಬ್ಬರ್ ಸ್ಟಾಂಪುಗಳ್ನ ಉಪಯೋಗಿಸ್ತಿದ್ರೆ, 2002ನೇ ಇಸ್ವಿ ವೇಳೆಗೆ ಇಂತಹ ಎಷ್ಟು ರಬ್ಬರ್ ಸ್ಟಾಂಪುಗಳ್ಗೆ demand ಬರ್ತ್ಬೋದು? ಅದ್ರಿಂದ ಇಂತಹಾ ರಬ್ಬರ್ ಸ್ಟಾಂಪ್ ತಯಾರಕರ್ಗೆ ಎಷ್ಟು ಲಾಭ ಬರ್ತ್ಬೋದು? ನೀವೇ ಲೆಕ್ಕ ಹಾಕಿ!

ಆದ್ರಿಂದ, ನೀವೇನಾದ್ರೂ ಹೊಸಾ ಉದ್ಯೋಗ ಪ್ರಾರಂಭ ಮಾಡೋ plan ಹಾಕಿದ್ರೆ, ಇದೇ ನಿಮ್ಗೆ ಸುವರ್ಣಾವಕಾಶ!

(ಕೊನೇ ಮಾತು: ನೀವೇನಾದ್ರೂ ಈ ವ್ಯವಹಾರ ಪ್ರಾರಂಭ್ಸಿ ಲಾಭ ಮಾಡ್ಕೊಂಡ್ರೆ ನನ್ನ share ಕೊಡೋದನ್ನ ಮಾತ್ರ ಮರೀಬೇಡಿ!

ನಷ್ಟ ಆದ್ರೆ... ನಾನಂತೂ ಜವಾಬ್ದಾರನಲ್ಲಪ್ಪ!)

★★★

"ಆಮೇಲೆ?"

– ಆರ್ಕೆ

'ಏನ್ಸಾರ್, ತರಾತುರಿಯಲ್ಲಿ ವಿ.ಆರ್.ಎಸ್. ತಗೊಂಡ್ರಂತೆ. ಮುಂದೆ ಏನ್ ಮಾಡ್ಬೇಕಂತಾ ಇದೀರಾ ಸಾರ್'' ಎಂದು ಇನ್ನೂ ಸರ್ವೀಸ್‌ಗೆ ತಗುಲಿಹಾಕ್ಕೊಂಡಿದ್ದ ಪಕ್ಕದ ಮನೆ ಯುಜಮಾನ ಬೆಳಿಗ್ಗೇನೆ ವಾಕಿಂಗ್‌ನಲ್ಲಿ ಕೇಳಿದ.

''ಸೋಮಾರಿಯಾಗಿರ್ಬೇಕೆಂದು ಇದೀನಿ'' ಎಂದೆ

''ಆಮೇಲೆ?''

''ಸ್ವಲ್ಪ ದಿವಸ ಅಲೆಮಾರಿ''

''ಆಮೇಲೆ?''

''ಬೀದಿಮಾರಿ''


''ಆಮೇಲೆ?''

''ಕೂಗುಮಾರಿ'' ಎಂದು ಬ್ರೇಕ್ ಹಾಕಲು ಪ್ರಯತ್ನಪಟ್ಟೆ. ''ಇಲ್ಲ ಸಾರ್, ಅದಾದ ಮೇಲೆ ಏನು ಗೊತ್ತಾ?'' ಎಂದು ಒರು ಮಾದರಿಯಾಗಿ ಟ್ರಂಪ್‌ಕಾರ್ಡ್ ಎಸೆದ.

''ಏನು? ಆಮೇಲೆ?'' ಎಂದು ಸ್ಪೀಡ್ ಕಡಿಮೆ ಮಾಡಿದೆ.

''ಮನೇಲಿ ಮಾರಾಮಾರಿ ಸಾರ್'' ಎಂದು ಹೇಳಿ ಫಾಸ್ಟ್‌ಗೇರ್‌ಗೆ ಛೇಂಜ್ ಆಗಿ ಮುನ್ನುಗ್ಗಿದ.

ನಾನು ಅಲ್ಲೇ ಬ್ರೇಕ್‌ಡೌನ್ ಆದ ಜಲ್ಲಿಕಲ್ಲಿನ ಲಾರಿಯ ತರಹ ವಾಲಿದೆ.



ಇನ್centives - (ಉತ್ತೇಜಕ)

– ರುಂಡೂರಾನಾ

'ನೀನು, ನಿನ್ನ ಕೆಲಸಗಾರರಿಗೆ, ಏನು ಇನ್centives ಕೊಡ್ತೀಯೋ? ಅವರೆಲ್ಲಾ ಹಾಗೆ ಕತ್ತೆ ದುಡಿದ ಹಾಗೆ ದುಡಿತಾರಲ್ಲ' ಅಂತ ಕೇಳಿದ ಹಳೇ ಸ್ನೇಹಿತ ರಘು. ಅವನು ಯಾವಾಗಲೂ ಹೀಗೇನೆ. ನಾನು, ಏನೋ ಅಪರೂಪಕ್ಕೆ ಬಾಯಿ ಮುಚ್ಕೊಂಡು ಕೂತಿದ್ರೆ, ಅವನ್ಗಾಗಲ್ಲ.

ಸರಿ, ಇನ್ಸುಮ್ಮನೆ ಇರೋಕಾಗುತ್ಯೆ? ಶುರು ಮಾಡ್ದೆ. 'ನಾನು ಹೇಳ್ಕೊಳ್ಳೊ ಅಂತ incentives ನೇನು ಕೊಡ್ತಾ ಇಲ್ಲಕಣೊ. ಆದರೆ, ಅವರೆಲ್ಲರೂ ನನ್ನ ಹಾಗೆ ಮನುಷ್ಯರು. ಅವರ್ಗೂ ಸುಖ-ದುಃಖ, ನೋವು-ನಲಿವು, ಬೇಕು-ಬೇಡಗಳು ಇರುತ್ತೆ ಅನ್ನೋದನ್ನ ತಿಳಿದು, ಅವರನ್ನ ನೋಡ್ಕೋತೀನಿ ಅಷ್ಟೇ' ಅಂತಂದೆ.

ಈಗಿನ ಕಾಲದಲ್ಲಿ, 'ಬೇರೆಯವರೂ ನನ್ನ ಹಾಗೇನೇ'. ನನ್ನನ್ನ ಬೇರೆಯವರು ಯಾವ ರೀತಿ treat ಮಾಡ್ಬೇಕು ಅಂತ ಅನ್ಸುತ್ತೆ. ಹಾಗೇನೇ, ನಾನು ಸಹ ಅವರನ್ನ treat ಮಾಡ್ಬೇಕು - ಮಾಡಿದರೆ, ಅದೇ ಒಂದು ಒಳ್ಳೇ ಸಂಬಂಧಕ್ಕೆ ದೊಡ್ಡ 'ಉತ್ತೇಜಕ' ಆಗುತ್ತೆ.

ಮೇಲಿನ ಮನೋಭಾವನೆ, basic ಅಂದರೆ ಮೂಲ 'ಉತ್ತೇಜಕ' ಇಲ್ಲದೆ ಈ ಪ್ರಪಂಚಾನೇ ಇಲ್ಲ; ಏನು ಕೆಲ್ಸಾನು ಆಗೊಲ್ಲ. ಸಂಬಂಧಗಳೆಲ್ಲಾ ಕಡಿದು ಬೀಳುತ್ತೆ ಅಂತ ಅನ್ನೋದೆ ನನ್ನ ವಾದ. ಹಾಗೇನಾದರೂ incentivesನ ಗಮನದಲ್ಲಿಡದೆ ಮುಂದೆ ಹೋದರೆ ಬಹಳ ಕಷ್ಟಪಡಬೇಕಾಗುತ್ತೆ, ನೋಡಿ, ಎಲ್ಲಾದರೂ ಕೆಲ್ಸ ಸಿಕ್ಕೋದು, ಒಂದು ಮಾದರಿ licence ಸಿಕ್ಕ ಹಾಗೆ. ಆ licence ಸಿಕ್ಕಿದ ಮೇಲೆ, ಬೆಳಿಗ್ಗೆ ಹತ್ತು ಘಂಟೆಯಿಂದ ಸಾಯಂಕಾಲ ಐದು ಘಂಟೆ, ಆ ಜಾಗದಲ್ಲಿ ಕುಳಿತುಕೊಳ್ಳುವ ಮನಸ್ಸಿದ್ದರೆ (ಸಾಮಾನ್ಯವಾಗಿ ಸರ್ಕಾರಿ ಕಛೇರಿಗಳ ವೈಖರಿ) ಕುಳಿತುಕೊಳ್ಳೋದಕ್ಕೆ ಅರ್ಹತೆ ಸಿಕ್ಕಿದ ಹಾಗೆ. ಹಾಗೆ ದೇಹ ಕುಳಿತುರೋದಕ್ಕೆ, ಕೊಡೋದೆ ಸಮಬಳ ಅಂತ. ಅಲ್ಲಿ ಕೂತ ಮೇಲೆ ಕೆಲಸ ಮಾಡಲೇಬೇಕೆಂಬ ಕಡ್ಡಾಯ ಇಲ್ಲ. ಕೆಲಸ ಮಾಡಬೇಕಾದರೆ, 'ಉತ್ತೇಜಕ' ಇರಬೇಕು. ಅಂದರೆ ಅಮಿಶ ಇರಬೇಕು. ಕೆಲಸದ ಚುರುಕು "directly proportional" to incentive. ಹೆಚ್ಚು incentive ಹೆಚ್ಚು ಚುರುಕು. Office ಗಳಲ್ಲಿ ಕೆಲಸ ಆಗಬೇಕಾದರೆ ಕೊಡುವ Incentiveನ ಹೆಸರೇ 'ಲಂಚ' ಅಂತ. ಇದೇ ನೀವು Factory Worker's ಗೆ ಕೊಟ್ಟರೆ, ಅಲ್ಲಿ ಅದರ ಹೆಸರು "Production Bonus' ಅಂತ ಅನ್ನುಸ್ಕೊಳುತ್ತೆ.

ಅದಿರಲಿ, ನೀವು ಯಾವ ಆಫೀಸ್‌ಗೆ ಬೇಕಾದರೂ ಹೋಗಿ ಅಪ್ಪ. ಏನೂ incentive ಕೊಡದೆ ಕೆಲಸ ಮಾಡಿಕೊಂಡು ಬನ್ನಿ ನೋಡೋಣ ತಾಕತ್ ಇದ್ರೆ. ನೀವೂ ಏನೂ incentive ತೋರಿಸದಿದ್ರೆ, ನಿಮ್ಮ papers ಇದ್ದ ಜಾಗದಲ್ಲೇ ಇರುತ್ತೆ. ಕೆಲವು ಸಲ ಇರೋದೂ ಇಲ್ಲ. ಮಾಯವಾಗಿ ಹೊಗುತ್ತೆ. ಅದು ಪ್ರತ್ಯಕ್ಷ ಆಗಬೇಕಾದರೆ, ನೀವು incentive ಕೊಡಲೇಬೇಕು. ಕೊಟ್ಟ ತಕ್ಷಣ ಪ್ರತ್ಯಕ್ಷ.

ಅಲ್ಲಾರಿ, ನೀವು urgent ಆಗಿ ಬೇರೆ ಊರಿಗೆ ರೈಲಿನಲ್ಲೋ ಇಲ್ಲ ಬಸ್ಸಿನಲ್ಲೋ ಪ್ರಯಾಣ ಮಾಡಬೇಕಪ್ಪ, ನಿನ್ನ ಹೆಂಡ್ತಿ ಅಕ್ಕನ ಮಗನ ಚೌಲಕ್ಕೆ. ಮುಂಗಡ ಕಾಯ್ದಿರಿಸಕ್ಕೆ ನಿಮಗೆ ಸಮಯ ಇಲ್ಲ, ಅಥವಾ ಆಗ್ಲಿಲ್ಲ, ಎಲ್ಲಿ ನೀವು ಸೀದಾ ಸ್ಟೇಷನ್‌ಗೆ ಹೋಗಿ, ಸೀಟ್ ಖಾಲಿ ಇದ್ರೂನು ಅದನ್ನ ನಿಮಗೆ ಕೊಡಲಿ ನೋಡ್ತೀನಿ. ನಿಮಗೆ ಇಲ್ಲ ಅಂದ್ರು, ಹೆಣಗಿಸಿ, ನೀವು incentiveನ ಮೊಗಮ್ಮಾಗಿ exhibit ಮಾಡೋ ತನಕ ಸೀಟ್ ಇರೋದೇ ಇಲ್ಲ. ಕೊಟ್ಟ ತಕ್ಷಣ ಮಾತಾಡದೆ ಜೋಬ್‌ಗೆ ಇಳಿಸಿ, ನಿಮಗೆ oblige ಮಾಡ್ತಾನೆ ಅಲ್ವ T.T.? ಸಂತೋಷವಾಗಿ ಏನೋ ಗಳಿಸಿದವರ ತರಹ ಬೆವರು ಒರೆಸಿಕೊಳ್ಳುತ್ತಾ ಕೂತ್ಕೋತೀರಿ. Train ಹೊರಡುತ್ತೆ, ಅರ್ಧಕ್ಕರ್ಧ ಸೀಟೆಲ್ಲಾ ಖಾಲಿ ಇರುತ್ತೆ!

ಹೀಗೆಲ್ಲಾ ನೋಡಿದರೆ ಈ incentive ಒಂದು ತರಹ prime mover (ಮೂಲ ಚಾಲಕ) ಅಲ್ಲವಾ? ಏನು 'ಚಲನೆ' ಆಗಬೇಕಾದರೂ ಇದು ಇರಲೇಬೇಕು.

ಒಂದು ಸ್ವಂತ experience ಹೇಳ್ತೀನಿ ಕೇಳಿ. 'ನೀನು ಸಾಯಂಕಾಲ ready ಆಗಿರು, pictureಗೆ ಹೋಗೋಣ' ಅಂತಂದು officeಗೆ ಹೋದೆ. ಸಾಯಂಕಾಲ ಬಂದು ನೋಡ್ತೀನಿ. ಏನು, ನಗುನಗುತ್ತಾ, attractive ಆಗಿ ಡ್ರೆಸ್ ಮಾಡ್ಕೊಂಡು, ತಿಂಡಿ, ಕಾಫಿ ready ಮಾಡಿ ಬಾಗಿಲಲ್ಲೇ ಕಾಯ್ತಿದ್ದಾಳೆ ಮಡದಿ! ಹೇಗಿದೆ ನನ್ನ picture ಅನ್ನೋ 'ಉತ್ತೇಜಕ'? ಪ್ರತಿದಿನ ಯಾವುದೋ ಓಬಿರಾಯನ ಕಾಲದ ಸೀರೆ ಉಟ್ಟು, ಮುಖಾನು ಸರಿಯಾಗಿ ತೊಳೀದೆ, ಆ ಹಾಳು TV ಮುಂದೆ ಕೂತು, ನೋಡಿದ್ದೇ cinemaನೋ ಇಲ್ಲ, ನೋಡಿ ಕೇಳಿದ್ದೇ cinema ಹಾಡುಗಳ್ನ ಕೇಳ್ತಾನೋ ಇಲ್ಲ ತನ್ನ ಆದರ್ಶಾನೆ ಮರ್‍ತು 'ಆದರ್ಶ ದಂಪತಿಗಳ' Episode ನೋಡ್ತಾ, 'ಅಲ್ಲಿ ಕಾಫಿ ಡಿಕಾಕ್ಷನ್ ಒಲೆ ಮೇಲಿಟ್ಟಿದ್ದೀನಿ, ಬೆರೆಸಿಕೊಂಡು ಕುಡೀರಿ' ಅಂತ ನನ್ನ ಮುಖಾನು ನೋಡ್ದೆ ಹೇಳಿದ್ದುದು ಹೇಗಿತ್ತು? ಎಲ್ಲಕ್ಕಿಂತ ಆ ನಗು ಮುಖ ನೋಡಬೇಕಾದ್ರೇನೆ, incentive ತೋರಿಸಬೇಕು ಸ್ವಾಮಿ.

ಈಗ ಬನ್ನಿ ಇಷ್ಟು powerful ಆಗಿರೋ "incentive"ನ ಬಗ್ಗೆ ಸ್ವಲ್ಪ ಆಳವಾಗಿ ಯೋಚಿಸೋಣ.

ನನಗನ್ನುತ್ತೆ, ಇದು ಎಲ್ಲರ ಬ್ಲಡ್‌ನಲ್ಲೇ ಇರೋ genie ಅಂತ. ಎಲ್ಲರಿಗೂ incentive ಬೇಕು, ಆದರೆ ಯಾರಿಗೂ ಕೊಡೋ ಮನಸ್ಸಿರಲ್ಲ. One way, ಹುಟ್ಟಿದಾಗಿನಿಂದ ಸಾಯೋ ತನಕ ಇರೋ ವಿಷಯ. ಇದು ಒಂದು ತರಹ nature ಗಾಳಿ, ದೇವರುಗಳಂತೆ ಕಣ್ಣಿಗೆ ಕಾಣದ ಆದರೆ ಅನುಭವಿಸುವ ಸರ್ವಾಂತರ್ಯಾಮಿ.

ಮಕ್ಕಳು schoolಗೆ ಹೋಗಬೇಕಾದರೆ, ಸರಿಯಾಗಿ ಊಟ ಮಾಡಬೇಕಾದರೆ, ಹೆಂಡ್ತಿ ನಗ್ತಾನಗ್ತಾ ಇರಬೇಕಾದರೆ, ಏನಾದರೂ 'ಉತ್ತೇಜಕ' ಅವರ ಮುಂದಿಡಲೇಬೇಕು. ದೇವರ ಅನುಗ್ರಹ ಬೇಕೂಂತ ಎಷ್ಟೋ ಜನ ಅರ್ಚನೆ, ಅಷ್ಟೋತ್ರ, ಹವನ ಹೋಮ, ದಾನ ಧರ್ಮ, ಇನ್ನೂ ಏನೇನನ್ನೊ ಮಾಡಲ್ವೆ ಅವೆಲ್ಲಾ ಏನು ದೇವರಿಗೆ ತೋರಿಸೊ ಉತ್ತೇಜಕ ಅಲ್ವೇ? ಅಷ್ಟೇ ಯಾಕೆ, ಅಳಿಯ ಮಗಳನ್ನು ಚೆನ್ನಾಗಿ ನೋಡಿಕೊಳ್ಳಲಿ ಅಂತ ನೀವು "incentive" ಕೊಡಲ್ವೆ?

ಆ ದೇವರ ಮುಖಕ್ಕೆ ಮಂಗಳಾರತಿ ಎತ್ತಬೇಕಾದ್ರೂ, ಆ ಅರ್ಚಕರಿಗೆ ಕೊಡ್ಬೇಡ್ವೇ? Site allot ಆಗಬೇಕಾದರೆ, driving licence ಸಿಗಬೇಕಾದರೆ free ಕಡ್ಡಾಯ ಶಿಕ್ಷಣ ಜಾರಿಲಿರೋ ಈ ನಮ್ಮ ಮಹಾನ್ ಭಾರತದಲ್ಲಿ ಮಕ್ಕಳಿಗೆ nursery, L.K.G. ಗೆ ಸಹ ಸೀಟ್ (ಜಾಗ) ಸಿಗಬೇಕಾದರೆ, ಏನೆಲ್ಲಾ ತೋರಿಸಬೇಕು, ಎಷ್ಟೆಲ್ಲಾ ಕೊಡಬೇಕು, ಆ auntyಗೊ, uncleಗೊ, sisterಗೊ, motherಗೊ, ಇಲ್ಲ fatherಗೊ, ನೀವೇನೂ ಕೊಡದಿದ್ದರೆ ನಿಮ್ಮನ್ನ ಸುಮ್ನೆ 'ಗೊ' ಅಂತಾರೆ ಅಷ್ಟೆ. ಮಗು ಹುಟ್ಟಿದ nursing homeಗೆ ಸಾವಿರಾರು ತೆತ್ತೋದರ ಜೊತೆಗೆ, ಆ ಆಯಾಗೆ ಏನೂ ಕೊಡದೆ ಬಂದು ನೋಡಿ. ನೀವೇನಾದರೂ ಗ್ರಹಚಾರ ಕಮ್ಮಿಯಾಗಿ ಎರಡನೆ ಡೆಲಿವರಿಯಾಗಿ, ಅದೇ nursing homeಗೆ ಹೋಗೀ, ಆಗ ಮಾಡ್ತಾಳೆ, ಆ ಆಯಾ, ನಿಮ್ಗೆ ಸರಿಯಾಗಿ. ನೀವು ಹೊಡ್ಕೊಂಡರೂ, ನಿಮ್ಮ ಬಾಯಿಗೆ ಸರಿಯಾಗಿ ನೀರು ಹಾಕಲ್ಲ.

'ಪುಟ್ಟಿ ಒಂದು ಮುತ್ತು ಕೊಡಮ್ಮ, ಮುತ್ತು ಕೊಟ್ಟರೆ, ನಿಂಗೆ chacolate ಕೊಡ್ತೀನಿ' ಅಂತ ಆ ಪುಟ್ಟ ಕಂದಂಗೆ ನೀವು "incentive ಇಲ್ಲದೇ ಮುತ್ತು ಕೊಡಬೇಡ' ಅನ್ನೋ virusನ ಇಂಜೆಕ್ಟ್ ಮಾಡೊಲ್ವೆ? ನೋಡಿ ಅಲ್ಲಿಂದ ಶುರು.

'ಮುಂದೆ ಏನೋ ಸಿಕ್ಕುತ್ತೆ, ಸುಖವಾಗಿರ್ತೀವಿ' ಅಂತನ್ನೊ ಒಂದು incentive ನಿಂದ ತಾನೆ. ಇಂದಿನ ಕಷ್ಟನಷ್ಟಗಳನ್ನ ಮರೆತು, ಮುಂದೆ ಕನಸು ನನಸಾಗುವ ನಂಬಿಕೆಯಿಂದ ಈ ಬದುಕನ್ನ ಮುಂದುವರಿಸೋದು? ಮುಂದೆ ಬರಬಹುದಾದ ನಲಿವಿನ 'ಉತ್ತೇಜಕ' ದಿಂದ ಇಂದಿನ ನೋವನ್ನು ಮರೆಯೋದು. ಮುದ್ದು ಮಗು ಮುಖ ನೋಡೋ ಆಸೆ ಅನ್ನೊ incentive ನಿಂದ ಅಲ್ವೇನ್ರಿ ತಾಯಿ ಮಗುನ ಹೆರೋ ನೋವನ್ನ ತಿನ್ನೊಕೆ ತಯಾರಾಗೋದು? ಆ ಮಗು ದೊಡ್ಡಾಗ್ತಾ, ಆಗ್ತಾ,

ನಮಗ ಸಂತಸ, ಒಳ್ಳೆ ಹೆಸರು, ತರುತ್ತೆ ಅಂತ ಹಾಗೂ ನಮಗೆ ವಯಸ್ಸಾದ್ಗ ನಮಗೆ ಒಂದು ಗತಿ ಆಗುತ್ತೆ ಅಂತನ್ನೋ incentive ನಿಂದ ತಾನೆ, ಇಂದು ನಮ್ಮಲ್ಲಿರೋ ಸರ್ವಸ್ವನೂ ಅದರ ಏಳಿಗೆಗೆ ಧಾರೆ ಎರೆಯೋದು?

ಕಡೆಗೆ, ಹಾಯಾಗಿ ಸಾಯುವ, ಸತ್ತಮೇಲೆ ಮುಂದಿನ ಕಾರ್ಯನಾದರೂ ಸುಗಮವಾಗಿ ಆಗುತ್ತೆ ಅಂದ್ರೆ, ಆ crematoriumನಲ್ಲಿ ಹೆಣ ಸುಡಬೇಕಾದರೆ ಆ corporation ಪರಿಚ್ಛಂದ್ರಂಗೆ ಕೈ ಬಿಸಿ ಮಾಡಿದ್ರೇನೆ ಅವನು ಹೆಣ ಬಿಸಿ ಮಾಡೋದು, ಅಲ್ವೇನ್ರಿ?

ಇಷ್ಟು ಪವಿತ್ರವಾದ, ಬೇಕೇಬೇಕಾದ, ಜೀವನದಲ್ಲಿ ಸರ್ವತೋಮುಖ ಪಾತ್ರವಹಿಸಿರುವ, ಈ ಲಂಚ, Bonus, Compensation, Gift, Reward, Dowry ಅಂತ ಬೇರೆ ಬೇರೆ ಹೆಸರಿನಲ್ಲಿ ಕರೆಸಿಕೊಳ್ಳುವ ಆದರೆ basically ಒಂದೇ ಆಗಿರುವ ಆ ಪರಮಾತ್ಮನಂತಿರುವ 'ಉತ್ತೇಜಕ'ನ ಅಪಾರ್ಥ ಮಾಡಿಕೊಂಡು ಅದನ್ನ ಅವಹೇಳನ ಮಾಡಿ, ಅದನ್ನ 'ಬುಡಸಹಿತ ಕಿತ್ತೊಗಿತೀನಿ', ಅಂತ ಹೇಳೋದು ಬಿಟ್ಟು, ಅದನ್ನ systamatise ಮತ್ತು regularise ಮಾಡೋದು ಒಳ್ಳೇದಲ್ವೆ?

ಅಯ್ಯೊ, ಈ ಮಾಹನ್ ವಿಷಯದ ಬಗ್ಗೆ ಬರೀತ ಹೋದ್ರೆ ಕೊನೇನೆ ಇಲ್ಲ. ಆದಿ ಅಂತ್ಯವಿಲ್ಲದ್ದು. ಇದರ ವಿಷಯ ಯೋಚಿಸಿದಷ್ಟು ಆಳ ಆಗ್ತಾ ಇರತ್ತೆ.

ಈ 'ಉತ್ತೇಜಕ' ಜೀವನದುದ್ದಕ್ಕೂ, ನಮ್ಮ ಜೊತೆ ಇದ್ದು, ನಮ್ಮ ಆಗು ಹೋಗುಗಳಿಗೂ, ಏಳಿಗೆ-ಬೀಳಿಗೆಗಳಿಗೂ ಕಾರಣವಾಗಿದೆ ಎಂದು ಗಂಟಾಘೋಷವಾಗಿ, ಎದೆತಟ್ಟಿ ಹೇಳಲು ನಾನು ಹರ್ಷಿಸುತ್ತೇನೆ. ಎಲ್ಲರೂ 'ಉತ್ತೇಜಕ' ತೆಗೆದುಕೊಳ್ಳುವುದರ ಜೊತೆಗೆ ಸಂತೋಷದಿಂದ ಕೊಡುವುದನ್ನು ರೂಢಿಸಿಕೊಳ್ಳಬೇಕು. ಹಾಗೆ ಆದಾಗ ಸರ್ವತೋಮುಖ ಬೆಳವಣಿಗೆಯಾಗಿ, ಸರಿಸಮಾನವಾದ ಸಮಾಜ ನಿರ್ಮಿತವಾಗುತ್ತೆ ಅಂತ ಅಂಬೋದು.

ನನಗೆ ಈ 'ಹರಟೆ'ಯನ್ನು ಹರಟಲು 'ಉತ್ತೇಜಕ' ನೀಡಿದ ನಿಮಗೆಲ್ಲರಿಗೂ ಆಭಾರಿ.



ಹೌದಮ್ಮ, ಸಕ್ರೆ,
ಪಥ್ಯ ಮಾಡುವಾಗ,
ಜಾಮೂನು, ಚಂದ್ರಹಾರ,
ಚಿರೋಟಿ ಇವುಗಳನ್ನೂ
ಬಿಡಬೇಕಾಗುತ್ತೆ

ಪುಸ್ತಕ ಪರಿಚಯ

- ಕೃಷ್ಣ ಸುಬ್ಬರಾವ್

ವಕ್ರೇಶ ವಚನ

ಲೇಖಕ: ಹಾ.ರಾ.

ಪ್ರಕಾಶನ: ಗುಲಾಬಿ ಪ್ರಕಾಶನ

ಕೊರವಂಜಿ ಬಳಗದ ಲೇಖಕರಲ್ಲಿ ಪ್ರಮುಖರಾದ ಹಾ.ರಾ. (ಹೆಚ್.ಆರ್. ಶಂಕರನಾರಾಯಣ) ಅವರು ರಾಶಿ ಗರಡಿಯಲ್ಲಿ ತಯಾರಾದವರು. ತಿಳಿಹಾಸ್ಯ ಸಲೀಸಾಗಿ ಸಮೃದ್ಧಿಯಾಗಿ ಅವರ ಲೇಖನಿಯಿಂದ ಹೊರಬಂದಿದೆ. ವೃತ್ತಿಯಲ್ಲಿ ವಕೀಲರಾದ ಹಾ.ರಾ. ಅವರಿಗೆ ಪ್ರತಿಯೊಂದು ವಸ್ತುವನ್ನು ವಿಶ್ಲೇಷಿಸುವ ಹಾಗೂ ವಿವಿಧ ಕೋನಗಳಿಂದ ನೋಡುವ ಪ್ರವೃತ್ತಿ ಸಹಜವಾಗಿ ಬೆಳೆದು ಬಂದಿದೆ. ಸುತ್ತಮುತ್ತಲಿನಲ್ಲಿ ನಡೆಯುವ ವೃತ್ತಾಂತಗಳನ್ನು ವಕ್ರದೃಷ್ಟಿಯಿಂದ ನೋಡಿ ಅವುಗಳನ್ನು ಒಂದೆಡೆ ದಾಖಲಿಸಿದ್ದಾರೆ ಅದೇ ವಕ್ರೇಶ ವಚನ. ಬೆನ್ನುಡಿಯಲ್ಲಿ ಪ್ರೊ. ಅ.ರಾ. ಮಿತ್ರ ಹೇಳುವಂತೆ ಹಾ.ರಾ. ಅವರಿಗೆ ಕೆದಕುವ ಬುದ್ಧಿ ಇದೆ.

ಕ್ರಿಕೆಟ್‌ನಿಂದ ಪ್ರಾರಂಭವಾಗುವ ವಕ್ರೇಶ ವಚನ ಸೆಂಚುರಿ ದಾಟಿದೆ. ಅಂದರೆ 103 ವಚನಗಳನ್ನು ಸೇರಿಸಿಕೊಂಡು ಒಳ್ಳೆ ಇನ್ನಿಂಗ್ಸ್ ಕೊಟ್ಟಿದೆ. ಒಂದು ಎರಡು ರನ್‌ಗಳನ್ನು ಹೊಡೆಯಲು ಪ್ರಯತ್ನಿಸದೆ ಪ್ರತಿಯೊಂದು ಬೌಂಡ್ರಿ ಹಾಗೂ ಸಿಕ್ಸರ್ ಎತ್ತುವ ಸಾಹಸ ಮಾಡಿದ್ದಾರೆ. ಅನೇಕ ಪ್ರಯೋಗಗಳು ಸಫಲವೂ ಆಗಿವೆ. ಕನ್ನಡ ಪುಸ್ತಕ ಪ್ರಕಟಿಸುವ ಸೌಭಾಗ್ಯದ ಬಗ್ಗೆ ನಾಲ್ಕು ಸಾಲಿನ ಬೌಂಡ್ರಿ ಚೆನ್ನಾಗಿದೆ.

ಕನ್ನಡ ಪುಸ್ತಕವ ಪ್ರಕಟಿಸುವುದೊಂದು ಯೋಗ
ಮುದ್ರಕನಿಗೆ ಹಣ ತೆತ್ತು, ಹಾಕು ದೀರ್ಘ ದಂಡಾಸನ
ವ್ಯಾಪಾರಿಗೆ ಹಾಕು ಐವತ್ತು ಡಿಸ್ಕೌಂಟಾಸನ
ಗ್ರಂಥಕರ್ತನ ಹಕ್ಕು ಶಿವಾಸನ! - ವಕ್ರೇಶ.

ಅಕ್ಕಮಹಾದೇವಿಯ ಶೈಲಿಯಲ್ಲಿ ವಕ್ರೇಶ ಮಹಾತ್ಮನನ್ನು ಹುಡುಕುತ್ತಾ ಹೋಗುತ್ತಾನೆ. ಮುರಿದು ಬೀಳುತ್ತಿರುವ ಮೌಲ್ಯವನ್ನು ಅರಸುತ್ತಾ ಹೋಗುತ್ತಾನೆ. ಮನೆಯೊಳಗೆ ಮನೆಯೊಡಯನಿದ್ದಾನೋ ಇಲ್ಲವೋ... ಎಂಬ ಸುಪ್ರಸಿದ್ಧ ವಚನವನ್ನು ಬಹಳ ಅರ್ಥಪೂರ್ಣವಾದ ಅಣಕು ಮಾಡಿದ್ದಾರೆ. ಹಾ.ರಾ. ಅವರು. ಮನೆಯೊಳಗೆ ಯಜಮಾನ ಯಾರು? ಎಂದು ಪ್ರಶ್ನಿಸಿ ''ಈಡಿಯಟ್ ಧಾಳಿ'' ಎಂದು ಟಿ.ವಿ.ಯ ಪ್ರಭಾವವನ್ನು ನಿರೂಪಿಸಿದ್ದಾರೆ.

ಹಾಸ್ಯಪುಸ್ತಕ ಭಂಡಾರಕ್ಕೊಂದು ಅನನ್ಯ ಕೊಡುಗೆ ''ವಕ್ರೇಶ ವಚನ''

ವ್ರತ ಕೆಟ್ರೊ...

– ನಕ್ಷತ್ರಿಕ

ಮಟಿ ಮಟಿ ಮಡಿ ಎಂದು ಅಡಿಗಡಿಗ್ಹಾರುವ, ಮಡಿ ಮಾಡುವ ಬಗೆ ಬೇರುಂಟೇ ಅಂದು ಗುನುಗುತ್ತಾ ಪದ್ಮಾವತಿ ಏಕಾದಶಿ ದಿನ ಅದೂ ಮಟ ಮಟ ಮಧ್ಯಾನ್ಹ ಮೂರನೇ ಸ್ನಾನ ಮಾಡ್ತಿದ್ದಾಗ ರೀ ಪದ್ಮಾವತಮ್ಮ ಅಂತ ಬಿರುಗಾಳಿ ಭಾಗೀರತೀಬಾಯಿ ಬಡ್ಕೊಂಡಿದ್ದು ಬಚ್ಚಲ್ಮನೆ ಬಾಗಿಲನ್ನ ಬಡ್ಕೊಂಡ್ ಬಂದು ಪದ್ಮಾವತಿ ಕಿವಿಗೆ ಅಪ್ಪಳಿಸಿತು.

ಬೇಗ ಬೇಗ ಸ್ನಾನ ಮುಗಿಸಿ ಮಡಿ ಸೀರೆ ಸುತ್ಕೊಂಡ್ ಬಂದು ಬಾಗಿಲು ತೆಗೆದರು ಪದ್ಮಾವತಿ. ಭಾಗೀರತೀಬಾಯಿ ಬಿಟ್ಟ ಕಣ್ಣು ಬಿಟ್ಟ ಹಾಗೆ ನಿಂತುಬಿಟ್ರು ''ಇದೇನ್ ಬಂತ್ರೀ ನಿಮಗೆ ಈ ಹೊತ್ತಲ್ಲಿ ಸ್ನಾನ ಮಾಡಿದೀರಲ್ಲ'' ಅಂದ್ರು. ಬನ್ನಿ ಕೂತ್ಕೊಳಿ... ಏನ್ ಹೇಳ್ಲಿ ನನ್ನ ಕರ್ಮ... ಏಕಾದಶಿ ದಿನ ಸ್ನಾನ ಮಾಡಿ ಪೂಜೆ ಮಾಡ್ದೆ ಒಂದ್ ತೊಟ್ಟು ನೀರೂ ಕುಡಿಯೋಲ್ಲ ನಾನು ಅಂತ ಎಲ್ರಿಗೂ ಗೊತ್ತು. ಮಡೀಲಿರುವಾಗ ಮುಟ್ಬಾರ್ದು ಅಂತಾನೂ ಗೊತ್ತು ಅಂಥಾದ್ರಲ್ಲಿ ಆ ಪಿಳ್ಳೆಯ್ಯಂಗಾರಿ ಮಗು ಓಡೋಡಿ ಬಂದು ಅತ್ತೇ ಅಂತ ಹಿಡ್ಕೊಂಬಿಡ್ತು... ಪಾಪಿ ಮುಂಡೇದು... ಒಂದು ಸಾಲ್ದು ಅಂತ ಇನ್ನೊಂದು ಅಂತ... ಮಗು ಮುಟ್ಟಿದ್ ಮೈಲಿಗೆ ಆಯ್ತಲ್ಲ ಅಂತ ಮತ್ತೆ ಸ್ನಾನ ಮಾಡಿ ಬೇರೆ ಮಡಿಬಟ್ಟೆ ಉಟ್ಕೊಂಡು ಪೂಜೆಗೇಂತ ಕೂತೆ... ಹಾಲಿನ ಮಂಗಮ್ಮ ಬಂದ್ಲು, ಅವಳಿಗೆ ಯಾವತ್ತೋ ಒಂದ್ ನೂರು ರೂಪಾಯಿ ಸಾಲ ಕೊಟ್ಟಿದ್ದೆ. ಅದನ್ನ ವಾಪಸ್ ಕೊಟ್ಟೋಳು ನೀವು ಬಹಳ ಉಪಕಾರ ಮಾಡಿದಿರಿ ಅಂತ ಕಾಲು ಮುಟ್ಟಿ ನಮಸ್ಕಾರ ಮಾಡೋದೇ... ಹಾಳಾದವಳು ದೂರದಿಂದ್ಲೆ ಕೈ ಮುಗಿದಿದ್ರೆ ಅವಳ ಕೈ ಸೇದಿ ಹೋಗಿರೋದೇ... ನೋಡಿ ಹೀಗಾಗಿ ಮೂರನೇ ಸ್ನಾನ ಆಯ್ತು. ಅದ್ಸರಿ ಬಂದಿದ್ದು ಏನ್ಸಮಾಚಾರ... ಕೂತ್ಕೊಳ್ಳಿ'' ಅಂದರು.

ಭಾಗೀರತೀಬಾಯಿ ಕೂತ್ಕೊಂಡು ''ಕಡ್ಲೆಕಾಳು... ಬದನೇಕಾಯಿ ಹಾಕಿ ಹುಳಿ ಮಾಡಿದ್ದೆ... ನಿಮಗಿಷ್ಟ ಅಂತ ಗೊತ್ತಿತ್ತು. ಒಂದೆರಡು ಸೌಟು ಕೊಟ್ಟು ಹೋಗೋಣ ಅಂತ ಬಂದೆ ತಗೊಳಿ'' ಅಂದು ಕಲಸೋರೆ ಮುಂದೆ ತಳ್ಳಿದ್ರು. ಪದ್ಮಾವತಿ ಬೇಜಾರು ಮಾಡ್ಕೊಂಡು ''ಅಲ್ಲಾರೀ ಹೋಗಿ ಹೋಗಿ ಏಕಾದಶಿ ದಿವಸನೇನ್ರೀ ನೀವು ಹುಳಿ ಮಾಡೋದು ನಾ ಹೇಗೆ ತಿನ್ಲಿ ಇವತ್ತು'' ಅಂದರು. ''ಹೇಗೇಂದ್ರೆ... ದಿನಾ ಹೇಗೆ ತಿನ್ತೀರೋ ಹಾಗೇ ಬಾಯಿಗೆ ಹಾಕ್ಕೊಂಡು'' ಅಂದು ಸುಲಭದ ಮಾತಾಡಿದರು ಭಾಗೀರತೀಬಾಯಿ ''ಅಲ್ಲರೀ... ಏಕಾದಶಿ ದಿವಸ ಒಂದು ತೊಟ್ಟು ನೀರೂ ಬಾಯಿಗೆ ಹಾಕ್ದೇ ಇರೋಳು ನಾನು ಅಂಥಾದ್ರಲ್ಲಿ ಇವತ್ತು... ಈ ಮುಸುರೆ ಹುಳಿ ತಿನ್ನೋದೇ ನಾನು ಒಂದಿಷ್ಟು

ಫಲಾಹಾರಾಂತ ಹೊಟ್ಟೆಗೆ ಹಾಕ್ಕೊತಾ ಇರೋದೇ ಈಚೆಗೆ ಒಂದಾರು ತಿಂಗಳಿಂದ. ಅದಕ್ಕೆ ಮುಂಚೆ ಅಂದ್ರೆ ಏಕಾದಶಿ ನಿಟ್ಟುಪವಾಸವೇ...'' ಅಂದು ಏಕಾದಶೀ ವ್ರತವನ್ನು ಸಮರ್ಥಿಸಿಕೊಂಡರು.

''ಏನೋಪ್ಪ... ಏಕಾದಶಿಯೋ... ದ್ವಾದಶಿಯೋ... ನಂಗಂತೂ ಹೊಟ್ಟೆ ಕಟ್ಟಿ ಅಭ್ಯಾಸವೇ ಇಲ್ಲ... ತಿನ್ನಬೇಕು ಅನಿಸಿದಾಗ ತಿಂದುಬಿಡೋದೇ ನನ್ನ ಗುರಿ ಕಣ್ರೀ... ಅಷ್ಟಕ್ಕೂ ಉಪವಾಸ ಇದ್ದು ಏನ್ರೀ ಸಾಧನೆ ಮಾಡಿದ ಹಾಗಾಯ್ತು... ಯಾರನ್ನ ಮೆಚ್ಚಿಸೋಕೆ ಹೇಳಿ... ಅದೂ ಅಲ್ದೆ ನಾವು ಮೇಲೆ ಹೋದಾಗ ಅಲ್ಲೇನಾದರೂ ಕೇಳ್ತಾರ... ನೀನು ಉಪವಾಸ ಮಾಡಿದ್ಯಾ ಇಲ್ವಾಂತ... ಹೋಗ್ಲಿ ಬಿಡೀಪ್ಪ ನಿಮ್ಮ ನಂಬಿಕೆಗೆ ನಾನ್ಯಾಕೆ ಅಡ್ಡಿ ಬರ್ಲಿ... ನಾ ಬರ್ತೀನಿ... ಹುಳಿ ಆರಿ ಹೋಗೋಕೆ ಮುಂಚೆ ಒಂದು ನಾಲ್ಕು ಒಬ್ಬೆ ಮೆತ್ಕೊಂಬಿಡಬೇಕು'' ಅಂದು ಭಾಗೀರತೀಬಾಯಿ ಹೊರಟರು.

ಇನ್ಯಾರಾದರೂ ಬಂದು ಅಮರಿಕೊಂಡಾರು ಎಂದು ಪದ್ಮಾವತಿ ಬಾಗಿಲು ಹಾಕಿ ಪೂಜೆಗೆ ಕೂತರು. ಪೂಜೆ ಮಾಡುವಾಗಲೂ ಕಲಸೋರೇಲಿ ತುಂಬಿದ್ದ ಹುಳಿ ಗಮ್ಮಂತ ವಾಸ್ನೆ ಹೊಡೀತಾ ಇತ್ತು. ಅವರಿಗೊಂದು ದ್ವಂದ್ವ ತಲೆ ಹಾಕ್ತು. ಅರರೇ ಇವತ್ತೇ ಏಕಾದಶಿ ಬಂದು ಅಮರ್ಕೊಬೇಕೇ... ಅಥವಾ ಆ ಭಾಗೀರತೀಬಾಯಿ ಇವತ್ತೇ ಕಡ್ಲೆಕಾಳು ಬದನೇಕಾಯಿ ಹುಳಿ ಮಾಡಬೇಕೇ ಅಂತ.

ಅವತ್ತು ಫಲಹಾರಕ್ಕೆಂದು ಸಜ್ಜಿಗೆ ಮಾಡಿಕೊಂಡರೂ ಸಜ್ಜಿಗೆಗೂ ಮಜ್ಜಿಗೆಗೂ ಮಧ್ಯೆ ಒಂದಿಷ್ಟು ಖಾರ ಇರಲಿ ಅಂದು ಅವಲಕ್ಕಿ ಮಾಡ್ಕೊಂಡ್ರು ಇನ್ನೇನು ಫಲಹಾರಕ್ಕೆ ಕೂರಬೇಕು ಅನ್ನುವಾಗ ಮತ್ತೆ ಬಾಗಿಲು ಸದ್ದು. ನೆಟ್ಟಗೆ ಫಲಹಾರವೂ ಮಾಡದ ಹಾಗೆ ಅದ್ಯಾವ ಗೂಬೆ ಬಂದು ಮುಟ್ಟಿಬಿಡುತ್ತೋ ಅಂದು ಬಾಗಿಲು ತೆಗೆಯೋ ಮುಂಚೆ ಕಿಂಡಿಯಿಂದ ನೋಡಿದರು. ಅವರಿಗಾಶ್ಚರ್ಯ... ಹೊರಗೆ ಯಜಮಾನರು ನಿಂತಿದಾರೆ. ಸೆರಗು ಸರಿಯಾಗಿ ಹೊದ್ದು ಬಾಗಿಲು ತೆಗೆದರು. ಬಾಗಿಲು ತೆಗೆದದ್ದೇ ತಡ ಬಳಿ ಬಂದ ಗೋಪಾಲರಾಯ... ಹಾಯ್ ಡಾರ್ಲಿಂಗ್ ಅಂದು ಪದ್ಮಾವತೀನ ಅನಾಮತ್ತಾಗಿ ಎತ್ತಿ ಗಿರಗಿರ ತಿರುಗಿಸಿ ಲೊಚಲೊಚಾಂತ ಮುತ್ತು ಕೊಟ್ಟು ಹಾಸಿಗೆ ಮೇಲೆ ಕೆಡವಿಬಿಟ್ಟ.

ಕನಸೋ, ಭ್ರಮೆಯೋ, ಭ್ರಾಂತಿಯೋ ಒಂದೂ ಅರಿವಾಗದೇ ಹೋದ್ರೂ ಏಕಾದಶಿ ವ್ರತ ಕೆಡ್ತು... ಉಪವಾಸ ಮಾಡಿಯೂ ಪುಣ್ಯ ಬರಲಿಲ್ಲ ಎಲ್ಲ ಮೈಲಿಗೆಯಾಯ್ತು ಅಂತ ಗಳಗಳಾಂತ ಅಳುಬಂತು. ಗೋಪಾಲರಾಯ ಹೆಂಡ್ತಿ ಹತ್ರ ಕೂತು ನಿನ್ನ ಹಣೆಬರಹವೇ ಇಷ್ಟಾಯ್ತಲ್ಲ... ಅಳುವಾಗ ಅಳ್ತೀಯ... ನಗುವಾಗ್ಲೂ ಅಳ್ತೀಯ... ನಿನ್ನ ಅಳುಮನೆ ಹಾಳ್ತಾಯ್ತು... ನಂಗೆ ಎಂಥಾ ಖುಷಿಯಾಗಿದೆ ಗೊತ್ತಾ ''ಅಂದು ತಬ್ಬಿ ಮತ್ತೆ ಲೊಚಪಚ ಮಾಡಿದ. ಆದರೆ ಪದ್ಮಾವತಿ ಮೊದಲಿನಷ್ಟು ಅಳಲಿಲ್ಲ... ಹೆಂಡ್ತಿನ ಬಿಗಿಯಾಗಿ ತಬ್ಬಿ ಇಲ್ನೋಡೇ...

ಮೊನ್ನೆ ಒಂದು ಲಾಟರಿ ಟಿಕೇಟು ತಗೊಂಡಿರ್ಲಿಲ್ವ ಅದಿಕ್ಕೆ ಎರಡು ಲಕ್ಷ ಬಂದಿದೆ. ಅದಿಕ್ಕೆ ಏನೇನು ಬೇಕೋ ಅದೆಲ್ಲ ತಗೋಬಹುದು ಕಣೇ...'' ಅಂದ. ಪದ್ಮಾವತಿ ಸೆರಗು ಹೊದ್ದು ''ಅದಕ್ಕೆ ಬಂದು ನನ್ನ ಹೀಗೆ ತಬ್ಕೊಬಹುದೇನ್ರೀ'' ಅಂದರು. ''ಇನ್ನೇನು ಮಾಡ್ಲಿ ನಂಗೆ ಲಾಟರಿ ಹೊಡೆದ್ರೆ ಪಕ್ಕದ ಮನೆಯವರನ್ನ ತಬ್ಕೊಳೋಕಾಗುತ್ತಾ... ಎಲ್ಲಿ... ನಿಂಗೇನು ಬೇಕೂಂತ ಪಟ್ಟಿಮಾಡು'' ಅಂದಿದ್ದೇ ತಡ ಅವಲಕ್ಕಿ ಸರ... ಡೈಮಂಡ್ ನೆಕ್ಲೇಸು... ಎರಡು ಜೊತೆ ಬಳೆ... ರೇಷ್ಮೆ ಸೀರೆ... ಒಂದೆರಡು ಉಂಗುರ... ಅಂದು ಹೇಳ್ತಾನೇ ಹೋದರು. ಅವರು ಹೇಳಿದ್ದನ್ನು ಗೋಪಾಲಯ್ಯ ಬರ್ಕೊಂಡ... ಮೊದಲು ಊಟ... ಆಮೇಲೆ ಈ ಲಾಟರಿ ಟಿಕೆಟ್ಟಿಗೆ ಎಲ್ಲಿ ಹಣ ಕೊಡ್ತಾರೇಂತ ಕೇಳ್ಕೊಂಡ್ ಬರ್ತೀನಿ'' ಅಂದ. ಪದ್ಮಾವತಿ ಒಂದೇ ತಟ್ಟೆ ಹಾಕಿದಳು. ಅಚ್ಚರಿಯಿಂದ ಹೆಂಡ್ತೀನ ನೋಡಿದ ಗೋಪಾಲಯ್ಯ ''ಇರ್ಲಿಬಾ... ಇವತ್ತು ಭೂಮದ ಊಟವಾಗ್ಲಿ'' ಅಂದು ಕೈ ಹಿಡಿದೆಳ್ಕೊಂಡು ಪಕ್ಕಕ್ಕೆ ಕೂರಿಸ್ಕೊಂಡ. ''ರೀ... ಇವತ್ತು ಏಕಾದಶಿ'' ಅಂದ ಹೆಂಡತಿ ಬಾಯಿಗೆ ಕಲಸಿದ ಅನ್ನದ ಉಂಡೆ ತುರುಕಿ ''ವ್ರತ ಕೆಟ್ರೂ ಸುಖ ಕೆಡಬಾರ್ದು ಅಂತಾರೆ ನಿನ್ನ ಏಕಾದಶಿ ಮನೆ ಹಾಳಾಯ್ತು'' ಅಂದು ತಾನೂ ಒಂದುಂಡೆ ಅನ್ನ ಬಾಯಿಗೆ ತುರುಕಿಕೊಂಡ... ''ರೀ ಒಂದ್ನಿಮಿಷ ಇರಿ'' ಅಂದು ಅಡಿಗೆ ಮನೆಗೆ ಹೋಗಿ ಕಲಸೋರೆಯಲ್ಲಿದ್ದ ಭಾಗೀರತಿಬಾಯಿ ಕೊಟ್ಟಿದ್ದ ಹುಳಿ ತಂದು ಅದನ್ನ ಅನ್ನಕ್ಕೆ ಹಾಕಿ ಕಲಸಿಕೊಂಡು ಗಂಡನ ಬಾಯಿಗೊಂದು ತುತ್ತು ಇಟ್ಟು ತಾನೊಂದು ತುತ್ತು ತಿಂದಳು 'ರೀ ಅನ್ಯಾಯವಾಗಿ ಹುಳಿ ಕೈಬಿಟ್ಟು ಹೋಗುತ್ತಲ್ಲ ಅಂದ್ಕೊಂಡಿದ್ದೆ. ಆದ್ರೂ ಏಕಾದಶಿದಿನ ಹುಳಿ ತಿನ್ನಿಸಿಬಿಟ್ರಲ್ರೀ...' ಅಂದಳು.

ಗೋಪಾಲಯ್ಯ ಡರ್ ಅಂತ ತೇಗಿ ''ಏಕಾದಶಿಯೋ ದ್ವಾದಶಿಯೋ ನನಗೊಂದೂ ಗೊತ್ತಿಲ್ಲ... ನನ್ನ ಅಭಿಪ್ರಾಯದಲ್ಲಿ ಚೆನ್ನಾಗಿ ತಿನ್ನಬೇಕು ಮಜಾ ಮಾಡಬೇಕು ಅಷ್ಟೆ... ಗೋಮ ಇಟ್ಟು ಎಲೆಯಡಿಕೆ ತಗೊಂಡು ರೂಮಿಗೆ ಬಾ'' ಅಂದ.

ಕಡ್ಲೆಕಾಳು ಬದನೇಕಾಯಿ ಹುಳಿಯೂ ಚೆನ್ನಾಗಿತ್ತು... ಗಂಡ ಅನಿರೀಕ್ಷಿತವಾಗಿ ಕೊಟ್ಟ ಮುತ್ತೂ ಚೆನ್ನಾಗಿತ್ತು.... ಆದರೆ ಏಕಾದಶಿ ವ್ರತ ಕೆಡ್ತಲ್ಲ ಅಂತ ಬೇಜಾರಾದ ಪದ್ಮಾವತಿಗೆ ಏಕಾದಶಿ ಏನು ಅಪರೂಪದ್ದೇ... ಮುಂಡೇದು ತಿಂಗಳಿಗೆರಡು ಸಾರಿ ಬಂದು ಮುಟ್ಕೊಳುತ್ತಲ್ಲ. ಈ ಸಾರಿ ತಪ್ಪಿದರೇನು ಮುಂದಿನ ಸಾರಿ ಮಾಡಿದರಾಯ್ತು ಅಂದು ಬೇಗಬೇಗ ಗೋಮಯ ಮಾಡಿ ಎಲೆಯಡಿಕೆ ತಟ್ಟೆ ಹಿಡಿದು ಕೋಣೆಗೆ ಹೋಗೋ ಹೊತ್ತಿಗೆ ಅದೆಲ್ಲಿತ್ತೋ ಮೋಡ... ನುಗ್ಗಿ ಬಂದು ದಡ ದಡಾಂತ ಮಳೆ ಸುರಿಯೋಕ್ಕೆ ಷುರುಮಾಡ್ತು.

★★★

ಮೇರಾ ಭಾರತ್ ಮಹಾನ್

- ಶಿವು

ಅಂತೂ ವರ್ಲ್ಡ್ ಕಪ್ ಮುಗಿಯಿತು. ಆ ಭಾನುವಾರ ರಾತ್ರಿ ಹತ್ತು ಘಂಟೆಗೆ ಆಸ್ಟ್ರೇಲಿಯಾ ಗೆದ್ದಾಗ ಮಲ್ಲೇಶ್ವರದ ನಮ್ಮ ಬೀದಿಯಲ್ಲಿ ಸಿಡಿದ ಪಟಾಕಿಗಳು ಬಹುಶಃ ಸಿಡ್ನಿಯಲ್ಲಿನ ಸಂಭ್ರಮವನ್ನು ಮೀರಿಸಿರಬಹುದು. ಇಂಡಿಯಾ ಸೂಪರ್ ಸಿಕ್ಸ್ ಹಂತದಲ್ಲೇ ಹೊರಬಂದದ್ದು ಒಂದು ದೃಷ್ಟಿಯಲ್ಲಿ ಒಳ್ಳೆಯದೇ ಆಯಿತೇನೋ. ತೀರಾ ಆಟಕ್ಕೇರಿಸಿದ, ಹಣದ ಹೊಳೆಯಲ್ಲಿ ಮಿಂದು ಮೀಯುತ್ತಿರುವ ಭಾರತದ ಕ್ರಿಕೆಟ್ ಟೀಮ್‌ನ ಏರುಪೇರುಗಳನ್ನು ಮಂತ್ರಮುಗ್ಧರಾಗಿ ನೋಡುತ್ತಿದ್ದ ನಾಡಿನ ಜನತೆ ಆ ಹುಚ್ಚಿನಿಂದ ಹೊರಬಂದು ಈಗ ದೇಶದ ನಿಜ ಪರಿಸ್ಥಿತಿಯನ್ನು ಗಮನಿಸುವಂತಾಯಿತು. ಬೆಂಗಳೂರಿನಲ್ಲಿ ಬೆಚ್ಚಗೆ ಕುಳಿತು ಟಿ.ವಿ. ನೋಡುವ ಮಂದಿಗೆ, ಕಾರ್ಗಿಲ್ ಸಮರ ಬೇರಾವುದೋ ಒಂದು ದೇಶದಲ್ಲಿ ನಡೆಯುತ್ತಿರುವ ಹಾಗೆ ಕಂಡರೆ ಆಶ್ಚರ್ಯವೇನಿಲ್ಲ. ನಮ್ಮ ಯೋಧರು ಸೆಣೆಸುತ್ತಿರುವ ತಾಣ ಹದಿನೇಳು ಸಾವಿರ ಅಡಿ ಎತ್ತರದ ದುರ್ಗಮ ಪರ್ವತ ಪ್ರದೇಶ. ಕೇವಲ ಹದಿನೆಂಟು ಡಿಗ್ರಿ ತಾಪಮಾನಕ್ಕೆ ಛಳಿ ಊಹೆಗೆ ಮೀರಿದ್ದು. ಆಕ್ರಮಣಕಾರರು ಶಿಖರಗಳಲ್ಲಿನ ಆಯಕಟ್ಟು ಜಾಗಗಳಲ್ಲಿ ಕುಳಿತು ಕಣಿವೆಯ ಬುಡದಿಂದ ಮೇಲೇರಿ ಬರುವ ನಮ್ಮ ಯೋಧರನ್ನು ಗುಂಡಿಟ್ಟು ಕೊಲ್ಲುತ್ತಿರುವ ಈ ಪರಿಸ್ಥಿತಿಯಲ್ಲಿ ಶತ್ರುಗಳ ಉಚ್ಚಾಟನೆ ಸುಲಭದ ಮಾತೇನಲ್ಲ.

ಭಾರತದ ವಾಯುದಳದ ಲೆಫ್ಟಿನೆಂಟ್‌ಗೆ ತಿಂಗಳ ಫ್ಲೈಯಿಂಗ್ ಭತ್ಯ ಎಷ್ಟು ಗೊತ್ತೇ? ಸಾವಿರದ ಇನ್ನೂರು ರೂಪಾಯಿಗಳು. ಈಗ ತಿಂಗಳಿಗೆ ಕನಿಷ್ಟಪಕ್ಷ ನಲವತ್ತು ಬಾರಿ ಹಾರು ಹೋರಾಟ ನಡೆಸಬೇಕಾಗುತ್ತದೆ. ಅಂದರೆ ತನ್ನ ಜೀವವನ್ನ ಮುಡುಪಿಟ್ಟು ಈತ ಒಮ್ಮೆ ರಣಾಂಗಣಕ್ಕೆ ಹಾರಿ ಬದುಕಿ ಬಂದರೆ ಅವನಿಗೆ ಸಿಗುವ ಭತ್ಯ ಇಪ್ಪತ್ತೈದು ರೂಪಾಯಿಗಳು. (ನಿಮ್ಮ ಲೆಕ್ಕ ತಪ್ಪಾಗಿದೆ. ಸಾವಿರದ ಇನ್ನೂರನ್ನು ನಲವತ್ತರಿಂದ ಭಾಗಿಸಿದರೆ ಮೂವತ್ತಲ್ಲವೇ ಎನ್ನಬೇಡಿ. ಈ ಮೂವತ್ತರಲ್ಲಿ ಐದು ರೂಪಾಯಿ ಟ್ಯಾಕ್ಸ್ ಕಳೆದುಬಿಡುತ್ತಾರೆ) ಕಾಳಗದಲ್ಲಿ ಆತ ಮಡಿದರೆ ಆತನ ಕುಟುಂಬಕ್ಕೆ ಎರಡು ಲಕ್ಷ ರೂಪಾಯಿ ಸಿಗುತ್ತದಂತೆ. ವರ್ಲ್ಡ್ ಕಪ್‌ನ ಮ್ಯಾನ್ ಆಫ್‌ದ ಮ್ಯಾಚ್‌ಗೆ ಸಿಗುವ ಮೂರು ಸಾವಿರ ಪೌಂಡ್ ಅಂದರೆ ಎರಡು ಲಕ್ಷ ಹತ್ತು ಸಾವಿರ ರೂಪಾಯಿ ಈ ಸಂಖ್ಯೆಗೆ ತೀರ ಹತ್ತಿರ. ಹದಿನೆಂಟು ಸಾವಿರ ಅಡಿ ಎತ್ತರದಲ್ಲಿ ಹಾರಾಡುವಾಗ ನಮ್ಮ ಯೋಧ ಪರ್ವತದ

ತುದಿಯಿಂದ ಕೇವಲ ಸಾವಿರ ಅಡಿ ಎತ್ತರದಲ್ಲಿರುತ್ತಾನೆ. ಅಮೇರಿಕನ್ ಸ್ಟಿಂಗರ್ ಮಿಸ್ಸೈಲ್‌ಗಳಿಂದ ಆಕ್ರಮಣಕಾರರು ಬಹು ಸುಲಭವಾಗಿ ನಮ್ಮ ಓಬೀರಾಯನ ಕಾಲದ ಮಿಗ್ ವಿಮಾನಗಳನ್ನು ಹೊಡೆದುರುಳಿಸಬಹುದು. ಆದರೂ ಈತ ಬಹು ಉತ್ಸಾಹದಿಂದ ತನ್ನ ಸಾರ್ಟಿ ಹಾರಾಟ ನಡೆಸಿದ್ದಾನೆ. ಸಾವಿನ ದವಡೆಯಿಂದ ತಪ್ಪಿಸಿಕೊಂಡು ಬಂದ ನಚಿಕೇತ ಈಗ ಪುನಃ ರಣಾಂಗಣದಲ್ಲಿರುವನಂತೆ. ಯಾರ ರಕ್ಷಣೆಗಾಗಿ ಈ ಯೋಧರು ಹೀಗೆ ಪ್ರಾಣದ ಹಂಗು ತೊರೆದು ಕಾದಾಡುತ್ತಿದ್ದಾರೆ ಬಲ್ಲಿರಾ?

ಬನ್ನಿ, ಇಲ್ಲಿ ನೋಡಿ. ಬಿಹಾರದಲ್ಲಿ ಈತ ದೇವರಿಗೆ ನೂರ ಹನ್ನೊಂದು ತೆಂಗಿನಕಾಯಿ ಒಡೆದಿದ್ದಾನೆ. ಇನ್ನೂ ಹತ್ತು ಸಾವಿರದ ಒಂದು ತೆಂಗಿನಕಾಯಿ ಒಡೆಯುವ ಹರಕೆ ಹೊತ್ತಿದ್ದಾನೆ. ಒಂದು ಖ್ಯಾತ ಕೈಗಾರಿಕಾ ಸಂಸ್ಥೆ ಸಿದ್ಧಿವಿನಾಯಕ ಗುಡಿಯಲ್ಲಿ ಪೂಜೆ ಸಲ್ಲಿಸಿ ಭಕ್ತರಿಗೆ ಪ್ರಸಾದ ಹಂಚಿದೆ. ಗುಜರಾತಿನ ಒಬ್ಬ ತರುಣ ಉಪವಾಸ ವ್ರತ ಕೈಗೊಂಡಿದ್ದಾನೆ. ಈ ಎಲ್ಲ ಪೂಜೆ ಪುನಸ್ಕಾರ ಸಾವಿನ ದವಡೆಯಲ್ಲಿರುವ ನಮ್ಮ ಯೋಧರಿಗೆ ಎಂದು ನೀವು ಊಹಿಸಿದ್ದರೆ ಅದು ಸತ್ಯಕ್ಕೆ ದೂರದ ಮಾತು. ಭಾರತ ಇನ್ನೂ ಸೂಪರ್ ಸಿಕ್ಸ್ ಹಂತದಲ್ಲಿದ್ದಾಗ, ಭಾರತಕ್ಕೆ ವರ್ಲ್ಡ್ ಕಪ್ ದೊರಕಲೆಂದು ನಡೆಸಿದ ಚಟುವಟಿಕೆಗಳಿವು. ಫ್ಲೈಟ್ ಲೆಫ್ಟಿನೆಂಟ್ ಅಹುಜಾ ಕಾಳಗದಲ್ಲಿ ಮಡಿದು ಆ ಹುತಾತ್ಮನ ನಾಲ್ಕು ವರ್ಷದ ಮಗು ಚಿತೆಗೆ ಬೆಂಕಿ ಸೋಕಿಸಿದ ದಿನ ಟೈಮ್ಸ್ ಆಫ್ ಇಂಡಿಯಾದ ಹೆಡ್ ಲೈನ್, ಇಂಗ್ಲೆಂಡ್ ಮೇಲಿನ ನಮ್ಮ ವಿಜಯವನ್ನು ಸಾರಿ ಹೇಳುತ್ತಿತ್ತು. ನಮ್ಮೆಲ್ಲರ ಟಾಪ್ಸಿ ಟರ್ವಿ ಮೌಲ್ಯಗಳ ಬಗ್ಗೆ ನಿಮಗೆ ನಿಜಕ್ಕೂ ಬೇಸರ ಬಂದಿದ್ದರೆ ಇದನ್ನು ಸರಿಪಡಿಸುವ ಮಾರ್ಗ ತೀರ ಸುಲಭ. ನಿಮ್ಮ ಚೆಕ್ ಬುಕ್ ತೆಗೆದು, ನಿಮ್ಮ ಮನಸ್ಸಾಕ್ಷಿಗೆ ಅನುಗುಣವಾಗಿ ಒಂದು ಚೆಕ್ ಬರೆದು ಈ ಕೆಳಗಿನ ಅಡ್ರೆಸ್‌ಗೆ ಕಳಿಸಿಬಿಡಿ.

Army Central Welfare Fund
Deputy Director (Cw-8)
Adjutant General's Branch,
Army Headquarters,
West Block-III, RK puram
New Delhi - 110 066

ಚೆಕ್ಕುಗಳನ್ನು "Army Central Welfare Fund" ಹೆಸರಿಗೆ ನಮೂದಿಸಿ. ಮಡಿದ ಯೋಧರ ಕುಟುಂಬಗಳ ಹರಕೆ, ಆಶೀರ್ವಾದ ನಿಮ್ಮ ಮಕ್ಕಳನ್ನ ಸದಾ ನೆಮ್ಮದಿಯಿಂದ ಇಡುತ್ತದೆ ಎಂದು ಅಪರಂಜಿ ಆಶ್ವಾಸನೆ ನೀಡುತ್ತಾಳೆ.

ಶುಭ - ಆಶಯ

- ಕಮಲ ರಾಮಸ್ವಾಮಿ

ಸೀತೆ, ಸಾವಿತ್ರಿಯರಂತೆ ಸುಮಂಗಲಿಯಾಗು।
ಅಹಲ್ಯೆ, ದ್ರೌಪದಿಯಂತೆ ಪತಿವ್ರತೆಯಾಗು।
ಪೂರ್ವಜರ ಹರಕೆ -
ಹರಸುವವರು ಹಸಿಮೆಯ ಮದುಮಗಳ।

ರಾಜವಂಶದ ಸೀತೆಗೆ ದಕ್ಕಿದ್ದು ವನವಾಸ।
ರಾಜಕುವರಿ ಸಾವಿತ್ರಿಗೆ ಯಮನೊಂದಿಗೆ ಸೆಣಸಾಟ।
ಅಹಲ್ಯೆಯ ಪಾಡಂತೂ - ಶಿಲಾವಾಸ
ದ್ರೌಪದಿಯ ದಾಂಪತ್ಯ ಸುಖ - ವಿಧಿ ವಿಲಾಸ।

ಇವರೆಲ್ಲಾ ಪಟ್ಟ ಸುಖವೇನು, ಕಂಡ ಕನಸೇನು!
ಅದೆಲ್ಲಾ ಹಿಂದಿನ ಕಥೆ - ಈಗ ಹೀಗಿಲ್ಲ!
ಅಂದಿನಂತೆಯೆ ಇಂದು - ಈ ಜಾಯಮಾನ
ಹೆಣ್ಣಿಗೆಲ್ಲಿದೆ ಸ್ಥಾನಮಾನ: - ''ಕನ್ಯಾದಾನ''।

ಸೊಸೆ ತರುವ ಹಣದ ಚೀಲ
ದಣಿವಲ್ಲದ ಗಳಿಕೆ - ಯಾರಿಗುಂಟು ಯಾರಿಗಲ್ಲ
ತರಲಾಗದಿದ್ದಲ್ಲಿ - ಹಿಂಸೆ - ಶೋಷಣೆ
''ಇಲ್ಲ'' ಎಂದರೆ ಇದ್ದೇ ಇದೆ - ಸೀಮೆ ಎಣ್ಣೆ!

ಪರಿಹಾರವೇನು? ಕೊನೆಯಿಲ್ಲವೆ ಇದಕೆ?
ಯಾಕಿಲ್ಲ! ಸೆರಗು ಕಟ್ಟಿ, ಮೆಟ್ಟಿ ನಿಲ್ಲು!
ಕೆಚ್ಚೆದೆಯ ಕುವರಿಯಾಗು, ನಲುಗಿಸಿದರೆ ನಾಗಿನಿ।
ಕನಲಿಸಿದರೆ ಕೆಂಡ, ಬೆದರಿಸಿದರೆ ಬಿರುಸಾಗು।

ಬದುಕಿನಲಿ ನೀ ಕಂಡ ಕನಸು
ದಿಟವಾಗಬೇಕೆಂದರೆ, ಎಲೆ ಹೆಣ್ಣೆ।
ಸುಮದ ಕೋಮಲತೆಯ ಮರೆತು
ಗಡಸಾಗು - ನಿನ್ನ ಬಾಳಾಗ ಹದನು।



ಕ್ರಿಕೆಟ್ಟೂ ಇಲ್ಲ, ಕಾರ್ಗಿಲ್ಲೂ ಇಲ್ಲ,
ಈಗೇನ್ಮಾಡೋಣ ?

ಈ-ಪರಿಭಾಷೆ

- ಇಸ್ಮೆಯಿಲ್

'ಕಮ್ಯೂನಿಕೇಷನ್' ಅಂದರೇನು ಎಂಬುದರ ಬಗ್ಗೆ ನೂರಾರು ಸೆಮಿನಾರುಗಳಲ್ಲಿ ಭಾಗವಹಿಸಿ ಕೆಲವು ತರಗತಿಗಳನ್ನು ಸ್ವತಃ ತೆಗೆದುಕೊಂಡು ಅನೇಕ ಹೊಸ ಆಟಗಳನ್ನು ಸೃಷ್ಟಿಸಿ ಆಡಿ, ಆಡಿಸಿ ತೋರಿಸಿದ್ದೇನೆ. ಆದರೆ ನಾನು ಓದಿದ್ದು, ತಿಳಿದದ್ದು ಬಹಳ ಅಲ್ಪ ಎಂಬ ತಿಳುವಳಿಕೆ ಮೊನ್ನೆ ನನಗೆ ಒಂದು ಮೆಡಿಕಲ್ ಶಾಪ್‌ನಲ್ಲಾಯಿತು ಎಂದರೆ ನೀವು ನಂಬುವುದು ಕಷ್ಟ. ನನ್ನ ಅನುಭವ ನಿಮಗೂ ಆಗಬಹುದು ಆಗ ತಿಳಿಯುತ್ತದೆ.

ನಾವು ಏತಕ್ಕೆ ಮಾತಾಡುತ್ತೇವೆ? ಎಂಬ ಪ್ರಶ್ನೆಯನ್ನು ಬಹಳ ವಿದ್ಯಾರ್ಥಿಗಳ ಮುಂದೆ ಹಾಕಿದ್ದೇನೆ. ಅನೇಕ ಸ್ವಾರಸ್ಯಕರವಾದ ಉತ್ತರಗಳು ಬಂದಿವೆ. ಅದು ಅಷ್ಟು ಮುಖ್ಯವಲ್ಲ. ನಮಗೆ ಬೇಕಾದ್ದನ್ನು ನಾವು ಪಡೆಯುವ ಸಲುವಾಗಿ ನಾವು ಮಾತನಾಡುತ್ತೇವೆ. ಆದ್ದರಿಂದ ನಾವು ಪ್ರಾಣಿಗಳಿಗಿಂತ ಉತ್ತಮ. ಆದರೆ ನಾವು ಮಾತನಾಡಿದ್ದು ನಾವು ಯಾರನ್ನು ಉದ್ದೇಶಿಸಿ ಮಾತನಾಡಿದ್ದೇವೆಯೊ ಅವರಿಗೆ ತಿಳಿದರೆ ಸಾಕು. ಮಗುವಿನ ಭಾಷೆ ತಾಯಿಗೆ ಅರ್ಥವಾದರೆ ಸಾಕು ಕಮ್ಯುನಿಕೇಷನ್ ಪರಿಣಾಮಕಾರಿ ಎನ್ನಬಹುದು. ಹಾಗೆ ಗಿರಾಕಿಗಳಿಗೆ ತಮ್ಮದೇ ಆದ ಪರಿಭಾಷೆ ಇರುತ್ತೆ, ವ್ಯಾಪಾರಿಗೆ ಅದು ತಿಳಿದರೆ ಸಾಕು. ಮೊನ್ನೆ ನಾನು ನನ್ನ ಕೊಬ್ರಾ (ಕೋ-ಬ್ರದರ್) ಮೆಡಿಕಲ್ ಶಾಪ್‌ನಲ್ಲಿ ಹತ್ತು ನಿಮಿಷ ನಿಲ್ಲುವ ಪ್ರಸಂಗ ಬಂತು. ಅಲ್ಲಿ ಒಬ್ಬ ಹಳ್ಳಿಯವ ಬಂದ.

''ಸ್ವಾಮಿ ಸ್ನಾನ ಮಾಡೋಕ್ಕೆ ಮಾತ್ರೆ ಬೇಕು ಅಂತ'' ಕೇಳಿದ.

ನನ್ನ ಕೋಬ್ರ ನನ್ನ ಮುಖ ನೋಡಿ ತನಗೆ ಈ ಪರಿಭಾಷೆ ಅರ್ಥವಾಗಿದ್ದರೂ ''ಸ್ನಾನ ಮಾಡೋಕ್ಕೆ ಮಾತ್ರೆನಾ...?'' ಕೇಳಿದ.

''ನನ್ನ ಹೆಂಡ್ತಿ ಸ್ನಾನ ಮಾಡೋಕ್ಕೆ ಸಾರ್'' ಎಂದ ಗಿರಾಕಿ.

''ಮುಂಚೆ ಸ್ನಾನ ಮಾಡೊಕ್ಕೊ, ನಂತರ ಸ್ನಾನ ಮಾಡೊಕ್ಕೊ?'' ಎಂದು ಕೇಳಿದ ನನ್ನ ಕೋಬ್ರ.

''ನಂತರ ಸ್ನಾನ ಮಾಡೊಕ್ಕೆ'' ಅಂದ. ಹಳ್ಳಿಯವ ಒಂದು ಶೆಲ್ಫ್‌ನಿಂದ ತೆಗೆದು ಹಳ್ಳಿಯವ ಎಷ್ಟು ಮಾತ್ರೆ ಕೇಳಿದನೊ ಅಷ್ಟು ಟ್ಯಾಬ್ಲಟ್ ಕೊಟ್ಟ ನನ್ನ ಕೋಬ್ರ.

ಒಂದುಕ್ಷಣ ಮಂಕಾಗಿದ್ದ ನನಗೆ ತಕ್ಷಣ ಅವರ ಸಂಭಾಷಣೆಯನ್ನು ಡಿ-ಕೋಡ್ ಮಾಡಿದಾಗ ಜ್ಞಾನೋದಯವಾಯಿತು. ಗಿರಾಕಿ ಕೇಳಿದ್ದು 'ಪೋಸ್ಟ್‌ಪೋನ್‌ಮೆಂಟ್ ಪಿಲ್ಸ್' ಅಂತಾ.

ಕಮ್ಯುನಿಕೇಷನ್ ಎಫೆಕ್ಟಿವ್ ಅನ್ನಿಸಿತು!

ಗಂಡನ ಗೋಳು

- ಎ.ಎಸ್. ಇಜೇರಿ

ಇತ್ತಿತ್ಲಾಗ ನನ್ನ ಹೆಂಡ್ತಿ ಕಿರಿ ಕಿರಿ ಮಾಡ್ತಾಳ್ರಿ!
ಯಾಕೋ ಏನೋ ನಂಗೊತ್ತಿಲ್ಲ ಆಕೀನ ಕೇಳ್ಬೇಕ್ರಿ!!

ಸೀರೆಗಂದ್ರೆ ಮೇಕಪ್ಪು ಮುಗಿಸಿ ತಯಾರಾಗ್ತಾಳ್ರಿ!
ಷರಟೀಗಂದ್ರೆ ಈಗೇನವಸರ ಆಮೇಲೆ ಅಂತಾಳ್ರಿ!!

ಗೆಳತಿರ್ನೆಲ್ಲ ಕರೆದು ಪಾರ್ಟಿ ಮಾಡ್ತಾಳ್ರಿ!
ನಮ್ಮ ಫ್ರೆಂಡ್ಸು ಬಂದ್ರೆ ಮೀಟಿಂಗು ಅಂತಾ ಸಮಾಜಕ್ಹೋಗ್ತಾಳ್ರಿ!!

ಅವರ ಅಣ್ಣ ಬಂದ್ರೆ ಹಾಡು ಹೇಳ್ತಾ ಅಡುಗೆ ಮಾಡ್ತಾಳ್ರಿ!
ನಮ್ಮ ತಮ್ಮ ಬಂದ್ರೆ ತಲೆ ನೋವು ಅಂತಾ ಮಲಕೊಂಡುಬಿಡ್ತಾಳ್ರಿ!!

ಅವರ ಅಮ್ಮ ಬಂದ್ರೆ ಹಮ್ಮು ಬಿಮ್ಮು ಎರಡೂ ಬರ್ತಾವ್ರಿ!
ನಮ್ಮ ಅಮ್ಮ ಬಂದ್ರೆ ಕೆಮ್ಮು ಅಂತಾ ಕ್ಯಾಕರಸ್ತಿರ್ತಾಳ್ರಿ!!

ಸಂಬಳದ ದಿನ ಸಂಭ್ರಮದಿಂದ ಕಾಯ್ತಾ ಇರ್ತಾಳ್ರಿ
ಮರುದಿನ ನೋಡಿದ್ರ ಅಪರಿಚಿತರಂಗ ಆಡಾಡತಿರ್ತಾಳ್ರಿ!!

ಇತ್ತಿತ್ಲಾಗ ನನ್ನ ಹೆಂಡ್ತಿ ಕಿರಿ ಕಿರಿ ಮಾಡ್ತಾಳ್ರಿ!
ಯಾಕೋ ಏನೋ ನಂಗೊತ್ತಿಲ್ಲ ಆಕೀನ ಕೇಳ್ಬೇಕ್ರಿ!!

ರುಬ್ಬುವ ಗುಂಡಿಗೊಂದು ಹಿಡಿಕೋಲು!

– ಪ್ರಭಾ

ಸಂಬಳದ ದಿವಸ ಅಂದರೆ ನಿಮಗೆ ಹೇಗೋ ತಿಳೀದು. ಆದರೆ ಬೆವರು ಬಸಿದು ಅಲ್ಲ ಸಾರಿ ರಕ್ತ ಬಸಿದು ದೇಶವನ್ನ ಮುಂದೆ ತರಲು ಕೈಲಿ ಸ್ಪ್ಯಾನರು ಹಿಡಿದು ನಿಂತಿರುವಂತಹ ಪ್ರೊಲಿಟೇರಿಯನ್ ಜಾತಿಗೆ ಸಂಬಳದ ದಿವಸ ಅಂದರೆ ಅತ್ಯಂತ ಸಂಭ್ರಮದ ದಿವಸ. ಇಡೀ ತಿಂಗಳು ರಕ್ತ ಬಸಿದಿದ್ದರ ಪರಿಣಾಮವಾಗಿ ಅಂದು ಪ್ರತಿಫಲ ಸಿಗುತ್ತೆ. ಇಂತಹ ಪ್ರತಿ ಫಲದಲ್ಲಿ ಹುಟ್ಟಿದಾಗಲಿಂದಲೂ ಶೇಖರಿತವಾಗಿದ್ದ ಯಾವ ಆಸೆಯನ್ನು ಪೂರೈಸಿಕೊಳ್ಳಬಹುದು ಎಂದು ಈ ಗುಂಪಿನ ಜನ ಲೆಕ್ಕಹಾಕುವಂತಹ ದಿವಸ.

ನಾಗರಾಜನ್ ಅಂತ ನನ್ನ ಕಲೀಗು ಒಬ್ಬ, ತಮಿಳುನಾಡಿನ ಕಡೆಯಿಂದ ಬಂದು ಇಲ್ಲಿ ಅನ್ನ ದುಡಿಯಲು ಆರಂಭಿಸಿ ಫ್ಯಾಕ್ಟರಿ ಹತ್ತಿರದಲ್ಲೇ ಒಂದು ಸೈಟು ಕೊಂಡು ಮನೆ ಕಟ್ಟಿದ್ದ. ಅರೆಬರೆ ಮನೆ ಒಳಗೆ ಸೇರೂ ಇದ್ದ. ಹದಿನೈದು ಇಪ್ಪತ್ತು ವರ್ಷದ ಹಿಂದೆ ಈ ಮನೆ ಕಟ್ಟಿಸಿದ್ದು. ಆಗ ಅವರಮ್ಮ ಜೀವಂತ ಇದ್ದರಂತೆ ಮನೆಗೆ ಒಂದು ಒರಳು ಕಲ್ಲು ಇವನೇ ಆರ್ಡರು ಕೊಟ್ಟು ಮಾಡಿಸಿ ಹಾಕಿದ್ದನಂತೆ. ರುಬ್ಬೋಗುಂಡೂ ಸಹ ಒರಳ ಕಲ್ಲಿನ ಸಮೇತ ಬಂದಿತ್ತಂತೆ. ರುಬ್ಬುವ ಗುಂಡಿನ ಮೇಲ ಹದಿನೈದು ಮೀಟರು ವ್ಯಾಸದ, ನೂರೈವತ್ತು ಮಿಲಿಮೀಟರು ಆಳದ ಗುಂಡಿ ಸಹ ತೋಡಿಸಿದ್ದನಂತೆ. ಈ ಗುಳಿಗೆ ಒಂದು ಒಳ್ಳೆಯ ಮರ ಸಿಕ್ಕಿಸಿದರೆ ಇಡ್ಲಿ ದೋಸೆ ರುಬ್ಬುವ ಅನುಕೂಲ ಅಂತ ಅವರಮ್ಮ ಆಗ ಹೇಳಿದ್ದರಂತೆ. ಕಳೆದ ತಿಂಗಳು ಸಂಬಳ ಪಡೆದಾಗ ಈ ಪೆಂಡಿಂಗ್ ಕೆಲಸ ಮುಗಿಸಿದೆ ಎಂದು ಈತ ಸಂತೃಪ್ತ ಭಾವದಿಂದ ಹೇಳಿದ. ಅವನ ಮುಖದಲ್ಲಿ ಮಿಂಚು ಹೊಳೀತಿತ್ತು! ಇಂತಹ ಸಣ್ಣ ಪುಟ್ಟ ಕೆಲಸಗಳಿಗೂ ಇಷ್ಟು ದೀರ್ಘ ಕಾಲ ಕಾಯಬೇಕಾದಂತಹ ಪರಿಸ್ಥಿತಿಯನ್ನ ನಮ್ಮ ಈ ಪ್ರೋಲಿಟೇರಿಯನ್ ಬಂಧುಗಳೇ ನಿರ್ಮಾಣ ಮಾಡಿಕೊಂಡಿರುತ್ತೇವೆ. ಸಂಬಳದ ದಿವಸ ಕಾರ್ಖಾನೆಯ ಗೇಟಿನ ಬಳಿ ಬಂದು ಕಾಯುವ ಮಾರ್ವಾಡಿಗಳು, ಲಬ್ಬೆಲವರು, ಅವರ ಏಜೆಂಟುಗಳು ಇವರುಗಳನ್ನು ನೋಡಿದಾಗ ಕರುಳು ಕಿವುಚಿದ ಹಾಗಾಗುತ್ತೆ. ಪಾಪ ಇಡೀ ತಿಂಗಳ ಸಂಬಳ ಇವರ ಪಾಲು ಆಗುತ್ತೆ. ಅಂತ ಅನಿಸಿದರೂ ಪಾಪ ಸಮಯಕ್ಕೆ ಸಹಾಯ ಮಾಡಿದವರಲ್ಲವೇ ಈ ಜನ ಅಂತ ಅನುಕಂಪ ಮಾಡುವುದೂ ಉಂಟು. ಸಂಬಳದ ದಿವಸ ಈ ನಮ್ಮ ಪ್ರೊಲಿಟೇರಿಯನ್ನು ಹಿಡಿಯುವ ಹಾಗಿಲ್ಲ.

ಮಜೆಸ್ಟಿಕ್ಕು, ಮಾರ್ಕೆಟ್ಟು ಶಿವಾಜಿನಗರ ಇಂತಹ ಏರಿಯಾದ ಸುತ್ತ ಹೆಂಡತಿ ಮಕ್ಕಳ ಕೈ ಹಿಡಿದು ಸಂಭ್ರಮದಿಂದ ಸಂತಸದಿಂದ ನಡೆದಾಡುವ ಜನರನ್ನು ನೀವು ಕಂಡಿರಾದರೆ ಅಂದು ಸಂಬಳದ ದಿವಸ ಎಂದು ಖಾತರಿ; ಮತ್ತೊಂದು ಖಾತರಿ ಎಂದರೆ ಈ ಜನ ಪ್ರೊಲೆಟೇರಿಯನ್‌ಗಳು ಎಂಬುದು ಅವತ್ತು ಈ ಮನುಷ್ಯ ಎಂತಹ ದಾರಾಳಿ ಆಗಿರುತ್ತಾನೆ ಎಂದರೆ ಲಕ್ಷ ಭಿಕ್ಷೆ ಕೇಳಿದವರಿಗೆ ಜೇಬಿನಲ್ಲಿನ ಚಿಲ್ಲರೆ ಸುರೀತಾನೆ, ಚಂದಾ ಕೇಳಿದವರಿಗೆ ಗರಿಗರಿ ನೋಟು ನೀಡುತ್ತಾನೆ; ಮಕ್ಕಳಿಗೆ ಪೇಪರ್ ದೋಸೆ ಐಸ್‌ಕ್ರೀಂ ಜೊತೆಗೆ ಗೋಬಿ ಮಂಚೂರಿ ಕೊಡಿಸಿದರೂ ಕೊಡಿಸಿದ. ತಿಂಗಳಿಗೆ ಒಂದೇ ಸಲ ಈ ಸಂಬಳದ ದಿವಸ ಬರೋದು, ಅದರಿಂದ ಅವತ್ತಾದರೂ ತನ್ನ ಮನೆಯವರ ಸಣ್ಣ ಪುಟ್ಟ ಆಸೆ ತೀರಿಸಿಬಿಡುವ ಮನೋಭಾವ ಇರುತ್ತೆ. ಅಂದಿನ ಮಟ್ಟಿಗೆ ಈತ ಕರ್ಣ.

ಬಹುಶಃ ಈ ಕಾರಣದಿಂದಲೇ ಇರಬೇಕು ಸಂಬಳ ಬಂದ ದಿನ ಕಾರ್ಖಾನೆ ಮುಂದೆ ಹೆಚ್ಚು ಜನ ಭಿಕ್ಷುಕರು ಕಣ್ಣಿಗೆ ಬೀಳುತ್ತಾರೆ. ಕೆಲವರಂತೂ ಇಂತಹ ದಿವಸದ ಖಾಯಂ ಗಿರಾಕಿಗಳು. ಎರಡೂ ಕೈಗಳು ಇಲ್ಲದ ಒಂದು ವ್ಯಕ್ತಿ - ಈ ಜಾತಿಗೆ ಸೇರಿದಾತ, ನಾನು ಕೆಲಸಕ್ಕೆ ಸೇರಿದಾಗಲಿಂದಲೂ ನನ್ನನ್ನು ಆಕರ್ಷಿಸಿದ ವ್ಯಕ್ತಿ. ಐದು ಐದೂ ಕಾಲಡಿ ಎತ್ತರದ ದುಂಡದುಂಡಗೆ ಮೈಕೈ ತುಂಬಿಕೊಂಡ ಈ ವ್ಯಕ್ತಿ ಸಂಬಳದ ದಿವಸ ಕಾರ್ಖಾನೆಯ ಮುಂದಿನ ಗೇಟಿನ ಬಳಿ ಹಾಜರು. ನಮ್ಮ ಸಂಬಳದ, ಬೋನಸ್ಸಿನ ದಿನಗಳು ನಮಗಿಂತಲೂ ಮೊದಲು ಈತನಿಗೇ ತಿಳಿದಿರುತ್ತೆ ಅಂತ ಅದೆಷ್ಟೋ ಬಾರಿ ನಾನು ನನ್ನ ಗೆಳೆಯರೆದುರು ಹೇಳುತ್ತಿರುತ್ತೇನೆ. ಎರಡೂ ಕೈಯಿಲ್ಲದ ಈಗ ಒಂದು ದೊಗಲೆ ಷರ್ಟು, ದೊಗಲೆ ಷರ್ಟಿಗೆ ಎರಡು ದೊಡ್ಡ ಜೇಬು ಧರಿಸಿರುವವ. ಮೊಣಕಾಲವರೆಗೆ ಖಾಕಿ ಚೆಡ್ಡಿ. ಕಾರ್ಖಾನೆ ಮುಗಿಸಿ ಕಾರ್ಮಿಕರು ಮನೆ ಸೇರಲು ಬಸ್ಸು ಹಿಡಿಯಲು ಹೋಗುವಾಗ ಈತ ಅಲ್ಲಿ ನಿಂತಿರುತ್ತಾನೆ. ಕಣ್ಣಿನಲ್ಲಿ ಒಂದು ರೀತಿಯ ಆದ್ರತೆ, ಮುಖದಲ್ಲಿ ಕೊಂಚ ದೈನ್ಯತೆ ಎರಡೂ ಕೈ ಮೊಂಡುಗಳನ್ನು ಹಾಗೆ ಹೀಗೆ ಆಡಿಸುತ್ತಾ ತನ್ನ ಜೇಬು ಮುಂದೆ ಬರುವ ಹಾಗೆ ಮೈ ಒಡ್ಡುತ್ತಾನೆ. ನಮ್ಮ ಕಾರ್ಮಿಕರು ಆತನ ಜೇಬಿಗೆ ತಮ್ಮ ಜೇಬಿನಲ್ಲಿನ ಚಿಲ್ಲರೆಯನ್ನೋ ಸಣ್ಣ ನೋಟುಗಳನ್ನೋ ಹಾಕುವುದು ಹೀಗೆ ಸುಮಾರು ವರ್ಷದಿಂದ ನಡೆದು ಬಂದಿದೆ. ಎರಡೂ ಜೇಬುಗಳ ತುಂಬ ಈತ ಚಿಲ್ಲರೆಗಳನ್ನ ನೋಟುಗಳನ್ನ ತುಂಬಿಕೊಂಡು ಹೋಗುವುದನ್ನ ಅನೇಕ ತಿಂಗಳುಗಳು ಕಂಡಿದ್ದೇನೆ. ಕಳೆದ ವರ್ಷ ಅದೇಕೋ ಬ್ರಿಗೇಡ್‌ರೋಡಿನ ಕಡೆಯಿಂದ ಬರುತ್ತಿದ್ದೆ. ಎದುರಿಗೆ ಈತ ಬರುತ್ತಿರುವುದು ಕಾಣಿಸಿತು. ತಿಂಗಳ ಸಂಬಳದ ದಿವಸ ಅಲ್ಲ ಅದು. ಅದರಿಂದಲೇ ಎಂದು ತೋರುತ್ತೆ ಈತನ ವೇಷದಲ್ಲಿ ಕೊಂಚ ವ್ಯತ್ಯಾಸವಿತ್ತು. ಪ್ಯಾಂಟು ತೊಟ್ಟಿದ್ದ ಚೌಕುಳಿಚೌಕುಳಿ ಷರಟನ್ನೂ ಪ್ಯಾಂಟಿನ ಒಳ ಸೇರಿಸಿದ್ದ. ಎರಡೂ ಮೊಂಡು ಕೈಗಳನ್ನು ಆಡಿಸುತ್ತಾ

ಪಟಪಟನೆ ನಡೆದು ಹೋದ. ಈತನನ್ನ ನೋಡುತ್ತಾ ನಿಂತಿದ್ದ. ಹೆಗಲ ಮೇಲೆ ಒಂದು ಕೈಬಿತ್ತು. ತಿರುಗಿದೆ. ಎಂ.ಜಿ. ರಸ್ತೆಯ ಕಛೇರಿಯಲ್ಲಿ ಕೆಲಸ ಮಾಡುವ ಗೆಳೆಯ ನಿಂತಿದ್ದ. ಉಭ ಕುಶಲೋಪರಿ ನಂತರ ಈ ಮೊಂಡು ಕೈಭಿಕ್ಷುಕನ ಬಗೆಗೆ ಹೇಳಿದ 'ಆತನೇನೋ? ಪಾಪ ತುಂಬಾ ಒಳ್ಳೆಯವನು ಆಕ್ಸಿಡೆಂಟ್‌ನಲ್ಲಿ ಕೈ ಹೋಗಿಬಿಡ್ತಂತೆ. ದೊಡ್ಡ ಸಂಸಾರ, ತಮ್ಮಂದಿರನ್ನ ಈತನೇ ಓದಿಸಿದನಂತೆ. ಇಲ್ಲೇ ಸಣ್ಣ ಪುಟ್ಟ ಬಡ್ಡೀಗೆ ದುಡ್ಡು ಬಿಡ್ತಾನೆ...' ಅಂತ ಆತನ ವಿಚಾರ ಹೇಳಿದ. ಬದುಕುವುದಕ್ಕೆ ಜನ ಎಂತೆಂತಹ ಸರ್ಕಸ್ ನಡೆಸ್ತಾರೆ ಅನಿಸಿತು. ಭಿಕ್ಷುಕರನ್ನ ಭಿಕ್ಷುಕರು ಅಂತ ಹೀಯಾಳಿಸುವುದರ ಬದಲಿಗೆ ಅವರು ಎಂತಹ ಮಹಾನ್ ಕೆಲಸಗಳಿಗೆ (?) ಭಿಕ್ಷೆ ಬೇಡುತ್ತಾರೆ ಅಂತ ತಿಳಿದರೆ ಹೇಗೆ ಅನಿಸಿತು. ಆದರೆ ಅವರಲ್ಲೂ ಮೋಸ ವಂಚನೆ ಇದೆಯಲ್ಲಾ ಅಂತ ಮನಸ್ಸು ಮತ್ತೊಂದು ಮೂಲೆಯಿಂದ ಗೊಣಗಿತು. ತಬ್ಬಿಬ್ಬಾದೆ. ಭಿಕ್ಷೆ ಬೇಡುವುದು ತಪ್ಪೋ ಭಿಕ್ಷೆ ನೀಡುವುದು ತಪ್ಪೋ "ಮಾರಲ್ಲಿ" (morally) ಯಾವುದು ಸರಿ? ಎಂಬಂತಹ ಸಮಸ್ಯೆಗೆ ಪರಿಹಾರ ಸಿಕ್ಕಿಲ್ಲ. ಆದರೂ ಮೂಲಭೂತವಾಗಿ ಮನುಷ್ಯ ಭಿಕ್ಷೆ ಬೇಡುವುದನ್ನ ಅನಿವಾರ್ಯವಾಗಿ ವೃತ್ತಿ ಮಾಡಿಕೋತಾನೇನೋ ಎಂಬ ಸಂದೇಹ ನನ್ನದು!

★★★

ಗೆಸ್ಟ್ ಹೌಸ್

ನಮ್ಮಪ್ಪ ಮನೀ ಯಜಮಾನ
ಹೋದರೆ ಬಾರ ಬಿಟ್ಟರೆ ಸಿಕ್ಕ
ಮಧ್ಯರಾತ್ರೀನಾಗ ಬಂದು
ಬಾಗಲಾ ಬಡೀತಾನ
"ಇದಾ ಮನೀನಾ ಮತ್ತೇನ...?"
ಅಂತ ಅವ್ವ ಕೇಳಿದ್ರ

"ಇದಾ...ಗೆ...ಗೆಸ್ಟ್..ಹೌ..ಹೌಸ್
ಐ ಆಮ್ ದಿ ಪೇಯಿಂಗ್ ಗೆ... ಗೆಸ್ಟ್"
ಅಂತಾ ತೊದಲ್ತಾನ
Dam Disgust

– ಹೆಚ್.ವಿ. ವೆಂಕಟಸುಬ್ಬಯ್ಯ

ನಮ್ಮ ನಿಮ್ಮಲ್ಲಿ

''ಈಗ ನಾನೇನು ಮಾಡಬೇಕು ಅಂತೀರಾ?'' ನಾನು ಮಿತ್ರರನ್ನ ಕೇಳಿದೆ.

''ದಿನವ ಬಂಜೆಯು ಮಾಡದಿರು'' ಅಂದರು ಮಿತ್ರ.

ಅಂದು ಶೀನು, ಮಿತ್ರ, ಹಾಗೂ ನಾನು ಧಾರವಾಡದ ''ಹೋಟೆಲ್ ಧಾರವಾಡ್''ದಲ್ಲಿ ಠಿಕಾಣಿ ಹೂಡಿದ್ದೆವು. ಸಂದರ್ಭ ರಮಾಕಾಂತ ಜೋಷಿಯ ಮಗಳ ಮದುವೆ. ಸಂದರ್ಭ ಅನ್ನುವುದಕ್ಕಿಂತ ಸಬೂಬು ಸರಿಯಾದ ಪದವೇನೋ. ಬೆಂಗಳೂರಿನಿಂದ ಒಂದೆರಡು ದಿನಗಳ ಮಟ್ಟಿಗೆ ತಪ್ಪಿಸಿಕೊಂಡು ಹೋಗಿ ಧಾರವಾಡದ Old World Charm ಅನ್ನು ಸವಿಯುವ ಅವಕಾಶ ನನ್ನ ಮಟ್ಟಿಗೆ ಸುಲಭದ ಮಾತೇನಲ್ಲ. ರಾತ್ರಿ ಬೆಂಗಳೂರಿನಿಂದ ಬಸ್ಸಿನಲ್ಲಿ ಹೊರಟು ಬಸ್ಸು ನಿಂತಾಗಲೆಲ್ಲಾ ನಮ್ಮ ಕಸ್ತೂರಿ ಹೇಳುವಂತೆ ಬಸ್ ಸ್ಟಾಂಡಿನ ಗೋಡೆಗಳಿಗೆ ವಂದಿಸಿ, ಧಾರವಾಡ ಸೇರಿದಾಗ ಬೆಳಗ್ಗೆ ಆರೂವರೆ. ಮದುವೆಯ ಮುಹೂರ್ತ ಹನ್ನೆರಡೂವರೆಗೆ. ಹನ್ನೊಂದಕ್ಕೆ ಕೀರ್ತಿಯವರ ಮನೆಗೆ ನುಗ್ಗಿ, ಹರಟೆ ಹೊಡೆದು ಅವರೊಟ್ಟಿಗೆ ಮದುವಮನೆ ಸೇರಿದಾಗ ಆಗತಾನೆ ಹಸೆಯ ಮೇಲೆ ಕಲಾಪಗಳು ಪ್ರಾರಂಭವಾಗಿದ್ದವು. ಚೆನ್ನವೀರ ಕಣವಿ, ಶಂಕರಮೊಕಾಶಿ ಪುಣೇಕರ, ಮುಂತಾಗಿ ಅನೇಕ ಖ್ಯಾತನಾಮರನ್ನು ಭೇಟಿಮಾಡಿ, ಭರ್ಜರಿ ರುಂಬಾಲುಗಳಿಂದ ಕಂಗೊಳಿಸುತ್ತಿದ್ದ ತಲೆಗಳನ್ನು ಕಣ್ಣು ತಣಿಯುವವರೆಗೂ ನೋಡುತ್ತಿದ್ದಂತೆ ಊಟಕ್ಕೆ ಕರೆ ಬಂತು.

ಪುಷ್ಕಳವಾದ ಊಟ ಮೆದ್ದು, ರೂಮಿಗೆ ಹಿಂತಿರುಗಿ ಒಂದೆರಡು ತಾಸು ನಿದ್ದೆ ತೆಗೆದು, ಕಾಫಿ ಕುಡಿಯುತ್ತಾ ಕುಳಿತಾಗ ಮಾತುಕತೆ ''ಬಾಳು ಸಾರ್ಥಕವೆನಿಸಬೇಕಾದರೆ ಏನು ಮಾಡಬೇಕು?'' ಎಂಬ ಮೂಲಭೂತ ಪ್ರಶ್ನೆ ಸುತ್ತ ಸುಳಿದಾಡಿತು.

''Let every one of your Actions be your last battle on earth. ಅಂತ ಹೇಳ್ತಾನೇ ಕಾಸ್ಟನೇಡಾ. ಯಾವುದೊಂದು ಕೆಲಸ ಕೈಗೊಂಡರೂ, ಅದನ್ನು ಸಾವಿನ ಮುಂಚಿನ ಕಟ್ಟಕಡೆಯ ಕೆಲಸ ಎಂದು ಭಾವಿಸಿ ಮುಂದುವರಿದರೆ, ಆ ಕೆಲಸಕ್ಕೆ ನಿನ್ನ ಸಂಪೂರ್ಣ ಅಂತಃಶಕ್ತಿ ಮೈಗೂಡತ್ತೆ ಅಂತಾನೆ ಕಾಸ್ಟನೇಡಾನ ಗುರು ಡಾನ್ ವಾನ್. ನೀವೇನಂತೀರ?''

ನಾನು ಮಿತ್ರರನ್ನ ಕೇಳಿದೆ.

ಮಿತ್ರರು ''ಗೃಹೀತ ಇವ ಕೇಶೇಷು ಮೃತ್ಯುನಾ ಕರ್ಮಮಾಚರೇತ್'' ಎಂದು ಹೇಳಿ ಕಾಫಿಯನ್ನ ಒಂದು ಗುಟುಕು ಹೀರಿ ಸಿಗರೇಟ್ ಹಚ್ಚಿದರು. ಶೀನುಗೆ ಸಂಸ್ಕೃತ ತಕ್ಕಮಟ್ಟಿಗೆ ಅರ್ಥವಾಗುತ್ತೆ. ನನಗೋ ಅದರ ಗಂಧವೇ ತಿಳಿಯದು. ಹಾಗಾಗಿ ನಾನು ನನ್ನ ಫೇವರೆಟ್ ಪ್ರಶ್ನೆ, ''ಹಾಗಂದ್ರೇನು?'' ಅಂತ ಕೇಳಿದೆ.

''ಸಾವು ನಿನ್ನ ಜುಟ್ಟನ್ನು ಹಿಡಿದಿದೆ ಎಂದೇ ಭಾವಿಸಿ ಕರ್ಮಕಾರ್ಯವನ್ನು ಮಾಡು. ಅಂತ ಅದರರ್ಥ. ನಮ್ಮ ಸೃಜನಶೀಲತೆ, ಮೂಲಭೂತವಾಗಿ ಸಾವನ್ನು ಮೀರಿನಿಲ್ಲುವ ಪ್ರಯತ್ನ ಅಷ್ಟೇ.''

ಅನಂತರ ಕುಮಾರವ್ಯಾಸ ಭಾರತದ ಕೆಲವು ಭಾಗಗಳನ್ನು ಉದ್ಧರಿಸಿ ಮಿತ್ರರು ''ಸಾರ್ಥಕತೆ'' ಎಂಬ ಪದದ ಅರ್ಥದ ಅನ್ವೇಷಣೆ ನಡೆಸಿದರು. ಮಿತ್ರರ ಓದಿನ ಹರಹು, ಅಸಾಧಾರಣ ನೆನಪಿನ ಶಕ್ತಿ, ಕುಮಾರವ್ಯಾಸನ ಕೃತಿಗಳ ಮೇಲೆ ಅವರಿಗಿರುವ ಪ್ರಭುತ್ವ, ಇವುಗಳನ್ನು ನೋಡಿದ ಮೇಲೆ ನಾನು ಇಲ್ಲಿನವರೆಗೂ ನಡೆಸಿರುವ ಹರಕು ಓದು ಏನೇನೂ ಸಾಲದು ಎನ್ನಿಸಿತು.

''ನಾನು ಓದಲೇಬೇಕಾದ ಹಲವು ಪುಸ್ತಕಗಳನ್ನು ಸಜೆಸ್ಟ್ ಮಾಡಿ'' ಅಂತ ಅವರನ್ನು ಕೇಳಿದೆ.

''ದುರ್ಗಾ ಭಗೀರಥ್ ಬರೆದಿರುವ ವ್ಯಾಸಪರ್ವ ಓದಿ. ಇರವಾಣಿ ಕರ್ವೆಯವರ ಯುಗಾಂತ ಸಹಾ ವ್ಯಾಸಂಗ ಯೋಗ್ಯವಾದ ಗ್ರಂಥ. Lectures on Ramayana, ರೈಟ್ ಆನರಬಲ್ ಶ್ರೀನಿವಾಸ ಶಾಸ್ತ್ರೀ ಬರೆದದ್ದು - ಇದನ್ನು ನೀವು ಓದಲೇಬೇಕು. ಸದನ್ಯಕ್ಕೆ ಇಷ್ಟು ಮುಗಿಸಿ. ಆಮೇಲೆ....'' ಎನ್ನುತ್ತಿರುವಾಗ ಶೀನು ಮಧ್ಯೆ ಬಾಯಿಹಾಕಿ ''ನಾಳೆ ಮೋಟಗಾನ ಹುಬ್ಬಳ್ಳಿಗೆ ಹೊಗೋ ಪ್ಲಾನ್ ಇದ್ದರೆ ಈಗಲೇ ನಾವು ಹೋಗಿ ವೆಹಿಕಲ್ ಬುಕ್ ಮಾಡಬೇಕು. ಅಲ್ಲದೇ ಕರದಂಟು ಇವತ್ತೇ ಆರ್ಡರ್ ಮಾಡಿದರೆ ನಾಳೆ ತಾಜಾ ಮಾಲು ದೊರಕುತ್ತೆ'' ಅಂತ ಹೇಳುತ್ತಾ ನಮ್ಮನ್ನು ಎಬ್ಬಿಸಿದ.

ಮೋಟಗಾನ ಹುಬ್ಬಳ್ಳಿಯಲ್ಲಿ ನರಸಿಂಹಸ್ವಾಮಿ ದೇವಾಲಯವಿದೆ. ಅತಿ ಪ್ರಾಚೀನ ಗುಡಿ ಇದು. ಮಲಪ್ರಭಾ ನದಿಯ ದಂಡೆಯ ಮೇಲೆ ಕುಳಿತಿರುವ ಈ ಪುಟ್ಟ ದೇವಾಲಯ ನಿಜಕ್ಕೂ ಪ್ರಶಾಂತ ಪರಿಸರದಲ್ಲಿದೆ. ದೇವರ ದರ್ಶನ ಮಾಡಿ ಹಿಂತಿರುಗುತ್ತಿರುವಾಗ ಮಿತ್ರ ''ಇಲ್ಲೇ ಕಿತ್ತೂರಿನ ಹತ್ತಿರ ನಮ್ಮ ಕುಲಕರ್ಣಿ ಇದ್ದಾನೆ. ಅವನನ್ನು ನೋಡಿ ಹೋಗೋಣ'' ಎಂದು ನಮ್ಮ ಹಾದಿಗೆ ಒಂದು ಮಿಡ್ ಕೋರ್ಸ್ ಕರೆಕ್ಷನ್ ಮಾಡಿದರು. ಕುಲಕರ್ಣಿ ಇದ್ದದ್ದು ಬಚ್ಚನ ಕೇರಿ ಎಂಬ ಒಂದು ಗ್ರಾಮದಲ್ಲಿ. one horse town ಅನ್ನೋಹಾಗೆ ಒಂದೇ ಮುಖ್ಯಬೀದಿಯ ಗ್ರಾಮ ಅದು. ದಾರಿಯನ್ನು ನಾವು ಪ್ರವೇಶಿಸುತ್ತಿದ್ದಂತೆ ಒಂದು ಮನೆ ಜಗಲಿಯ ಮೇಲೆ ನಾಲ್ಕೈದು ಗ್ರಾಮಸ್ಥರು ಕುಳಿತಿದ್ದರು. ನಾವು ಕಾರಿನಿಂದಿಳಿದು ಮಲಗಿದ್ದ ಎರಡು ನಾಯಿಗಳನ್ನು ದಾಟಿ, ''ಇಲ್ಲಿ ಕುಲಕರ್ಣಿಯವರ ಮನೆ ಯಾವುದು?'' ಎಂದು ಕೇಳಿದಾಗ ಕುಳಿತಿದ್ದ ಒಬ್ಬ ಗ್ರಾಮಸ್ಥ ಪಕ್ಕದ ಮನೆ ಜಗುಲಿ ತೋರಿಸಿದ. ಆ ಜಗುಲಿಯ ಮೇಲೆ ದಟ್ಟಿಪಂಚೆ,

ಬನ್ಯನ್ ಧರಿಸಿ, ತಲೆಗೆ ಟವೆಲ್ ಸುತ್ತಿ ಎಲೆ ಅಡಿಕೆ ಜಗಿಯುತ್ತಿದ್ದ ಒಂದು ವ್ಯಕ್ತಿ ಕುಳಿತಿತ್ತು. ಮಿತ್ರ ಆ ವ್ಯಕ್ತಿಯ ಬಳಿ ಸಾಗಿ ''ಇವರೇ ಕುಲಕರ್ಣಿ'' ಅಂತ ನಮಗೆ ಅವರ ಪರಿಚಯ ಮಾಡಿಸಿದರು.

ಈ ಕುಲಕರ್ಣಿ ಹಿಂದೆ ಅಧ್ಯಾಪಕ ವೃತ್ತಿಯಲ್ಲಿದ್ದಾಗ ಮಿತ್ರರ ಸಹೋದ್ಯೋಗಿಯಾಗಿದ್ದರಂತೆ. ಪಟ್ಟಣದ ಬದುಕಿಗೆ ಬೇಸರಗೊಂಡು ಈಗ ಸ್ವಗ್ರಾಮದಲ್ಲಿ ಪೂರ್ವಜರ ಮನೆ ತೋಟ ನೋಡಿಕೊಳ್ಳುತ್ತಾ ಇಲ್ಲೇ ನೆಲೆಸಿದ್ದಾರೆ. ನಮ್ಮ ಅನಿರೀಕ್ಷಿತ ಭೇಟಿ ಕುಲಕರ್ಣಿಗೆ ಅತೀವ ಸಂತೋಷ ತಂದಹಾಗೆ ಕಾಣಿಸಿತು. ''ಬನ್ನಿ, ಒಳಗೆ ಬನ್ನಿ, ಬಾಗಿಲು ಹುಷಾರು.'' ಎಂದು ಅವರು ಹೇಳುವಷ್ಟರಲ್ಲಿ ನಾನು ತಲೆತಾಕಿಸಿಕೊಂಡಾಗಿತ್ತು. ಹಳೇಕಾಲದ ಹಳ್ಳಿ ಮನೆ ಅದು. ನಾಡ ಹೆಂಚು. ಜಗುಲಿ ದಾಟಿ ಒಳಹೊಕ್ಕರೆ ಮಬ್ಬುಗತ್ತಲು. ಪಡಸಾಲೆ ದಾಟಿ ಹಿಂದಿನ ಹಜಾರಕ್ಕೆ ಹೋದೆವು. ಎಡಬದಿಯಲ್ಲಿ ಗೋಡೆಗೆ ಆತುಕೊಂಡ ಹಾಗೆ ಒಣಗಿದ ಕಡ್ಡಿಗಳನ್ನು ಪೇರಿಸಿಟ್ಟಿದ್ದರು. ನಮ್ಮ ಧಾರವಾಡದ ಗೈಡ್ ಶೀನು ಆ ಕಡ್ಡಿಗಳನ್ನು ತೋರಿಸುತ್ತಾ ''ಇವು ಹತ್ತಿಗಿಡದ ಕಡ್ಡಿಗಳು. ಒಲೆಗೆ ಉರುವಲಾಗಿ ಬಳಸಲು ಇಲ್ಲಿ ಒಟ್ಟು ಮಾಡಿದ್ದಾರೆ. ಈ ಜನ ಬಹಳ ಒಪ್ಪ. ಯಾವುದನ್ನೂ ಪೋಲು ಮಾಡರು'' ಅಂತ ವಿವರಿಸುತ್ತಿದ್ದಂತೆ ಕುಲಕರ್ಣಿ ನಮ್ಮ ಬಳಿ ಬಂದು ''ಅದನ್ನೇನು ನೋಡೀರಿ. ಈ ಬಾರಿ ಕಬ್ಬಿನ ಫಸಲು ಹೆಚ್ಚಾಗಿ, ಸಕ್ಕರೆ ಕಾರ್ಖಾನೆಗಳು ಕೊಳ್ಳುವುದನ್ನೇ ಬಿಟ್ಟಿದ್ದಾರೆ. ಕಳೆದ ತಿಂಗಳ ಬೆಳೆ ಇದು. ಉರುವಲಿಗೆ ಬರುತ್ತೆ ಅಷ್ಟೆ. ಬನ್ನಿ ಕೂಡೋಣ'' ಎಂದು ಪಡಸಾಲೆಗೆ ಕರೆದರು. ಶೀನು ಮುಖ ನೋಡಿದೆ. ಆತ ಮುಖ ಆ ಬದಿಗೆ ತಿರುಗಿಸಿದ.

ಪಡಸಾಲೆಯಲ್ಲಿ ಕುಳಿತು, ಕುಲಕರ್ಣಿಯವರ ಪತ್ನಿ ತಂದಿಟ್ಟ ಅವಲಕ್ಕಿ, ಚಹಾ, ಸವಿಯುತ್ತಿದ್ದಂತೆ ಮಿತ್ರ, ತಮ್ಮ ಮಿತ್ರನನ್ನು ಕುರಿತು ''ಮೇಘಸಂದೇಶ ಹಾಡು'' ಎಂದು ಆಜ್ಞಾಪಿಸಿದರು. ಕುಲಕರ್ಣಿ ಮರುಮಾತನಾಡದೇ ಬೇಂದ್ರೆಯವರ ಮೇಘಸಂದೇಶ ಹಲವು ತುಣುಕುಗಳನ್ನು ಸುಶ್ರಾವ್ಯ ಕಂಠದಲ್ಲಿ ಹಾಡಲು ಪ್ರಾರಂಭಿಸಿದರು. ಮಬ್ಬುಗತ್ತಲಿನ ಪಡಸಾಲೆ, ಹಾಡುಗಾರನ ಮೇಲೆ ಬಿಸಿಲುಮಚ್ಚಿನ ಸ್ಪಾಟ್ ಲೈಟ್, ದೂರದಲ್ಲಿ ಓಣಿಯ ಬಾಗಿಲಿನಿಂದ ಇಣುಕುತ್ತಿದ್ದ ಹೊಳೆಯುವ ಹಸಿರಿನ ತೋಟ, ಪದತಲದಲ್ಲಿ ಕುಳಿತು ಮೆಚ್ಚುಗೆಯ ಕಣ್ಣುಗಳಿಂದ ಪತಿಯನ್ನು ಎವೆಯಿಕ್ಕದೇ ನೋಡುತ್ತಿದ್ದ ಕುಲಕರ್ಣಿಯವರ ಪತ್ನಿ, ಇವುಗಳ ಹಿನ್ನೆಲೆಯಲ್ಲಿ ಬೇಂದ್ರೆಯವರ ಕವಿಹೃದಯದ ಸುಸ್ಪಷ್ಟ ಸಂವೇದನೆ - ಎಲ್ಲಿಂದಲೋ ಹೆಕ್ಕಿದ ಆ ಒಂದು ಕ್ಷಣ ನಮ್ಮ ಕಣ್ಣ ಮುಂದೆಯೇ Magical moment ಆದದ್ದನ್ನು ನಾನು ಬೇಗ ಮರೆಯಲಾರೆ.

- ಶಿವಕುಮಾರ್

ಬ್ರಹ್ಮದೇವ, ನಿನಗೊಂದು ಮನವಿ ಪತ್ರ

– ಬಿ.ಎಸ್. ಪ್ರಭಾಕರ್

ಹೇ! ಜನಸ್ಫೋಟಕ ಬ್ರಹ್ಮದೇವ ಲಾಲಿಸು.

ಶತ ಶತಮಾನಗಳಿಂದ ''ಮಾನವ'' ಎನ್ನುವ ಎರಡು ಕಾಲಿನ ಕ್ಷುಲ್ಲಕ ಪ್ರಾಣಿಯನ್ನು ಭೂದೇವಿಗೂ ಹೊರಲಾಗದಷ್ಟು ಅಧಿಕ ಸಂಖ್ಯೆಯಲ್ಲಿ ಅವಿರತವಾಗಿ ಸೃಷ್ಟಿಸಿ ಸೃಷ್ಟಿಸಿ ಭೂಮಿಗೆ ಕಳುಹಿಸುತ್ತಿರುವಿ.

ಆದರೆ, ನೀ ಸೃಷ್ಟಿಸುತ್ತಿರುವ ಮಾನವರೆಲ್ಲಾ (ಲಿಂಗಭೇದ, ಮೈಬಣ್ಣ, ಅವಗುಣಗಳನ್ನು ಹೊರತುಪಡಿಸಿ) ದೇಹರಚನೆಯಲ್ಲೇ ಮಾದರಿಯವ ರಾಗಿರುತ್ತಾರೆ.

''ಹೀಗೇಕೆ ಬ್ರಹ್ಮದೇವ?''

ನೀನೇ ಸೃಷ್ಟಿಸುತ್ತಿರುವ ಈ ಕ್ಷುಲ್ಲಕ ಮಾನವ ತಯಾರಿಸುತ್ತಿರುವ, ಕಂಪ್ಯೂಟರ್, ಕಾರು, ಟಿವಿ, ಕ್ಯಾಮರ, ಕೈಗಡಿಯಾರ, ವಿಮಾನ, ಮನೆಮಠ, ಒಡವೆ ವಸ್ತುಗಳು ಇತ್ಯಾದಿ ಇತ್ಯಾದಿಗಳನ್ನು ನೀನು ಗಮನಿಸಿದ್ದೇ ಆದರೆ, ನಿನಗೇ ತಿಳಿಯುತ್ತದೆ ಅವುಗಳು ಎಷ್ಟೊಂದು ವೈವಿಧ್ಯಮಯವಾಗಿರುತ್ತದೆ ಎನ್ನುವುದು. ಇವತ್ತಿನ ವಸ್ತು ಮುಂದಿನ ವಾರವೇ ಹಳೆಯದಾಗಿ, ಅದರ ಜಾಗದಲ್ಲಿ ಹೊಸ ಮಾದರಿಯ ವಸ್ತು ಮಾರಾಟಕ್ಕೆ ಸಿದ್ಧವಾಗಿರುತ್ತದೆ.

ಈ ಅದ್ಭುತ ಕಲ್ಪನಾ ಶಕ್ತಿ ನಿನಗೇ ಏಕಾದಶಿಯಾಗಿರುವುದು ಆಶ್ಚರ್ಯದಾಯಕವಾಗಿದೆ. ''ಮಾಡಿದ್ದೇ ಮಾಡೋ, ಹಾಡಿದ್ದೇ ಹಾಡೋ ಕಿಸ್ಬೈದಾಸ'' ಅನ್ನೋ ಹಾಗೆ ಒಂದೇ ಮಾದರಿಯ ಮಾನವನನ್ನು ಸೃಷ್ಟಿಸುತ್ತಿರುವುದು ನಿನಗೆ ಸರಿಯಲ್ಲವು. ಕಾಲಕ್ಕೆ ತಕ್ಕಂತೆ ನೀನೂ ಸಹ ಮಾರ್ಪಾಡಾಗಿ, ಮಾನವನ ದೇಹರಚನೆಯಲ್ಲಿ ಅಲ್ಪಸ್ವಲ್ಪ ಬದಲಾವಣೆಗಳನ್ನು ಅಳವಡಿಸುವುದು ಅತ್ಯಂತ ಸೂಕ್ತ ಮತ್ತು ಸಕಾಲಿಕ.

ಈ ಹಿನ್ನಲೆಯಲ್ಲಿ, ಹೇ ಸೃಷ್ಟಿಕರ್ತನೆ, ಈ ಪತ್ರದ ಮುಖೇನ ಈ ಕೆಳಗೆ ವಿವರಿಸಿರುವ ಸಲಹೆಗಳನ್ನು ನಿನ್ನ ಗಮನಕ್ಕೆ ತರಲು ಇಚ್ಛಿಸುತ್ತೇನೆ. ಈ ಎಲ್ಲ

ಸಲಹೆಗಳು ಸರಳವಾಗಿದ್ದು, ಅಳವಡಿಸಲು ಈಗಿರುವ ದೇಹ ರಚನೆಯಲ್ಲಿ ಹೆಚ್ಚಿನ ಬದಲಾವಣೆ ಮಾಡಬೇಕಿಲ್ಲ.

ಈ ಸುಲಭಸಾಧ್ಯವಾದ ಸಲಹೆಗಳು ನಿನಗೆ ಒಪ್ಪಿಗೆ ಆದ ಪಕ್ಷದಲ್ಲಿ 2000ದ ಇಸವಿ, ಜನವರಿ ಒಂದನೆ ತಾರೀಕು, ಮಧ್ಯರಾತ್ರಿ 12-00 ಗಂಟೆಯಿಂದ ಜಾರಿಗೆ ತರಲು ಬೇಡುತ್ತೇನೆ.

ಸಲಹೆ ನಂಬರ್ ಒಂದು:

ಮಾನವನಿಗೆ ಕೇವಲ ಒಂದೇ ಒಂದು ಹೊಟ್ಟೆಯನ್ನು ದಯಪಾಲಿಸಿದ್ದೀಯೆ. ಈಗಿನ ಕಾಲಕ್ಕೆ ಇದು ಸಾಲದೇನೋ ಅಂತ ಅನ್ನಿಸುತ್ತದೆ. ಆದ್ದರಿಂದ ಕನಿಷ್ಟಪಕ್ಷ ಎರಡು ಹೊಟ್ಟೆಗಳನ್ನು (ದನಗಳಿಗೆ ಇರುವಂತೆ) ದಯಪಾಲಿಸತಕ್ಕದ್ದು.

ಈ ಸಲಹೆ ವಿಶೇಷವಾಗಿ ನಮ್ಮ ದೇಶದ ಕೆಲವೊಂದು ಕಛೇರಿಗಳಲ್ಲಿ ಇರಬಹುದಾದಂತಹ ಉಂಡಾಡಿಗಳಿಗೆ ಬಲು ಉಪಯುಕ್ತವಾದುದಾಗಿದೆ. ಹೇಗೆಂದರೆ ಅಂತಹವರು ಎಲ್ಲೆಲ್ಲಿ, ಎಷ್ಟೆಷ್ಟು, ಏನೇನು ಸಿಕ್ಕುತ್ತದೋ (ಬಹಳಷ್ಟು ಪುಕ್ಕಟೆಯಾಗಿ) ಅದನ್ನೆಲ್ಲಾ ಗಬಗಬನೆ ಮೊದಲನೆಯ ಹೊಟ್ಟೆಗೆ, ಅಗಿಯದೇ ತುರುಕಿಕೊಳ್ಳಲು ಶಕ್ತರಾಗುತ್ತಾರೆ. ತತ್ಫಲವಾಗಿ ಅವರಿಗೆ ತಿನ್ನುವ ಕಾರ್ಯದಲ್ಲಿ ಬಹಳಷ್ಟು ವೇಳೆ ಉಳಿತಾಯವಾಗಬಲ್ಲದು. ಜೊತೆಗೆ ಅಜೀರ್ಣ, ಗ್ಯಾಸ್ ಟ್ರಬಲ್ಸ್‌ಗಳಂತಹ ಪಿಡುಗುಗಳಿಗೆ ಹೆದರಿಕೊಳ್ಳುವ ಅವಶ್ಯಕತೆ ಇರುವುದಿಲ್ಲ. ಏಕೆಂದರೆ ಮೊದಲನೆಯ ಹೊಟ್ಟೆ ಕೇವಲ ಶೇಖರಿಸುವ ಕೋಶವಾಗಿರುತ್ತದೆ. ಆನಂತರ ಕಛೇರಿಯಲ್ಲಿ ಟೇಬಲ್ ಮೇಲೆ ತಲೆ ಇಟ್ಟುಕೊಂಡು, ಸಾವಧಾನವಾಗಿ ಎಂಟು ಗಂಟೆಗಳ ಕಾಲ, ಹಾಯಾಗಿ ಮೆಲುಕು ಹಾಕುತ್ತಾ (ವಿಶ್ರಾಂತಿಗಾಗಿ ನೊಗದಿಂದ ಹೊರಬಿದ್ದ ಎತ್ತುಗಳಂತೆ) ಆಹಾರವನ್ನು ಚೆನ್ನಾಗಿ ಅಗಿದಗಿದು ಎರಡನೆಯ ಹೊಟ್ಟೆಗೆ ರವಾನಿಸಲು ಶಕ್ತರಾಗುತ್ತಾರೆ. ಈ ಏರ್ಪಾಡಿನಿಂದ ಅವರಿಗೆ ಪಚನ ಶಕ್ತಿ ಸುಧಾರಿಸುವುದೇ ಅಲ್ಲದೆ, ಮುಖದ ವ್ಯಾಯಾಮವೂ ಆಗಿ ಸೌಂದರ್ಯ ವೃದ್ಧಿಸುತ್ತದೆ.

ಇಷ್ಟೇ ಅಲ್ಲ ಬ್ರಹ್ಮದೇವ, ಈ ಏರ್ಪಾಡಿನಿಂದ ಸಿಟಿಬಸ್ಸಿಗೆ ಕಾಯುವ ಸಾರ್ವಜನಿಕರಿಗೆ ''ಬೋರ್'' ಹೊಡಿಸುವ ಚಲನಚಿತ್ರಗಳನ್ನು ನೋಡುವ ಪ್ರೇಕ್ಷಕರಿಗೆ, ಅಧಿಕಾರಿಗಳ ರೂಮಿನ ಮುಂದೆ ಕಾವಲಿರುವ ಜವಾನರಿಗೆ, ಇನ್ನೂ ಅನೇಕಾನೇಕ ವರ್ಗದವರಿಗೆ ಈ ಸಲಹೆ ಉಪಯುಕ್ತವಾಗಬಲ್ಲದು.

ಸಲಹೆ ನಂಬರ್ ಎರಡು:

ಊಸರವಳ್ಳಿಗಳಿಗೆ ಪರಿಸರ ಮತ್ತು ಸಂದರ್ಭಕ್ಕೆ ತಕ್ಕಹಾಗೆ ತಮ್ಮ ಮೈ

ಬಣ್ಣವನ್ನು ಬದಲಿಸಿಕೊಳ್ಳುವಂತಹ ಸಾಮರ್ಥ್ಯವನ್ನು ದಯಪಾಲಿಸಿದ್ದೀ. ಇದೇ ತರಹದ ಸಾಮರ್ಥ್ಯವನ್ನು ಮಾನವನಿಗೂ ದಯಪಾಲಿಸತಕ್ಕದ್ದು.

ಈ ಸಲಹೆ ನಮ್ಮ ರಾಜಕಾರಣಿಗಳಿಗೆ ಅತೀ ಹೆಚ್ಚಿನ ಉಪಯೋಗವಾಗುವುದರಲ್ಲಿ ಕಿಂಚಿತ್ತೂ ಸಂಶಯವಿಲ್ಲ.

ಕೆಲವೊಂದು ವರ್ಗದ ರಾಜಕಾರಣಿಗಳು, ಓಟಿಗಾಗಿ ಜನರ ಸಮಯದಲ್ಲಿ, ತಮ್ಮ ಮೈ ಬಣ್ಣವನ್ನು ಥಳಥಳಿಸುವ ಬಾಲಸೂರ್ಯನ ಬಣ್ಣಕ್ಕೆ ಬದಲಿಸಿ ಕೊಂಡಿದ್ದೇ ಆದರೆ, ಮುಗ್ಧ ಜನರು ಮರುಳಾಗಿ ಆ ವ್ಯಕ್ತಿಗೇ ತಮ್ಮೆಲ್ಲರ ಓಟು ಗಳನ್ನು ಹಾಕಿ, ಗೆಲ್ಲಿಸುವರು. ತದನಂತರ, ಗೆದ್ದ ವ್ಯಕ್ತಿ ತನ್ನ ಬಣ್ಣವನ್ನು ಬೇರೊಂದಕ್ಕೆ ಬದಲಿಸಿಕೊಂಡರಾಯಿತು, ಯಾರಿಗೂ ಗುರುತು ಸಿಕ್ಕದೆ, ನಿಶ್ಚಿಂತೆ ಯಿಂದ ಇರಬಹುದು. ಒಂದು ವೇಳೆ ಠೇವಣಿ ಕೈಬಿಟ್ಟರೆ ಮೈ ಬಣ್ಣವನ್ನು ಯಾವುದಾದರೂ ಸರ್ಕಸ್ ಬಫ್ರೂನಿನ ಬಣ್ಣಕ್ಕೆ ಬದಲಿಸಿಕೊಂಡರೆ ಜನರಿಗೆ ಗುರುತು ಸಿಕ್ಕದೆ ಅಪಮಾನ ಕಡಿಮೆ ಆದೀತು.

ಪರದೇಶಕ್ಕೆ ಹೋಗುವವರು (ಉದಾಹರಣೆಗೆ: ಆಫ್ರಿಕ ಇತ್ಯಾದಿ) ಅಲ್ಲಿಯ ಮೂಲ ನಿವಾಸಿಗಳ ಹಾಗೆಯೇ ಬಣ್ಣ ಬದಲಿಸಿಕೊಂಡರೆ ಜೀವನ ಸುಗಮವಾಗಬಲ್ಲದು.

ಪ್ರೇಮಿಗಳಿಗೂ ಪ್ರಯೋಜನಕಾರಿ ಈ ಸಲಹೆ. ತಂದೆ ತಾಯಿಯರಿಗೆ ಗೊತ್ತಾಗದಂತೆ ಬಣ್ಣ ಬದಲಾಯಿಸಿಕೊಂಡು ಪಾರ್ಕ್‌ಗಳಲ್ಲಿ ಮುಚ್ಚುಮರೆ ಮಾಡದೆ ಓಡಾಡಬಹುದು.

ಪೋಲೀಸರಿಗೆ ಈ ಸಲಹೆಯಿಂದ ಕೊಂಚ ಸಮಸ್ಯೆಗಳು ಜಾಸ್ತಿಯಾಗ ಬಹುದು. ಅದಕ್ಕೆ ಪರಿಹಾರ, ಸಲಹೆ ನಂಬರ್ ಮೂರರಲ್ಲಿ ಕೊಡಲಾಗಿದೆ.

ಸಲಹೆ ನಂಬರ್ ಮೂರು

ಕೆಲವು ಜಾತಿಯ ಶುನಕಗಳಿಗೆ ಅಘ್ರಾಣಿಸುವ ಮತ್ತು ಅಘ್ರಾಣಿಸಿದ್ದನ್ನು ಬಹಳ ಕಾಲದವರೆಗೂ ನೆನಪಿನಲ್ಲಿ ಇಟ್ಟುಕೊಳ್ಳುವ ಅಪಾರ ಸಾಮರ್ಥ್ಯವನ್ನು ನೀನು ದಯಪಾಲಿಸಿರುವುದು ಸರಿಯಷ್ಟೆ. ಇದೇ ರೀತಿಯ ಸಾಮರ್ಥ್ಯವನ್ನು ಮಾನವರಾದ ನಮಗೂ ದಯಪಾಲಿಸು.

ಈ ಸಲಹೆ ಪೋಲೀಸರಿಗೆ ಬಲು ಸಹಾಯಕಾರಿಯು.

ಕೈದಿಗಳು ಸಮಯ, ಸಂದರ್ಭಕ್ಕೆ ಮೈಬಣ್ಣ ಬದಲಾಯಿಸಿಕೊಳ್ಳಬಲ್ಲವರಾಗಿ ದ್ದರೂ (ಸಲಹೆ ನಂಬರ್ ಎರಡರ ಪ್ರಕಾರ) ವೈಯಕ್ತಿಕ ಮೈ ವಾಸನೆಯನ್ನು ಬದಲಾಯಿಸಿಕೊಳ್ಳಲಾರರು. ಇದರಿಂದ ಒಂದು ಸಾರಿ ಸಿಕ್ಕಿಬಿದ್ದ ಕೈದಿ ಜೈಲಿನಿಂದ

ತಪ್ಪಿಸಿಕೊಂಡರೂ, ಮೈವಾಸನೆಯ ದೆಶೆಯಿಂದ ಬೇಗ ಪೋಲೀಸರಿಗೆ ಸಿಕ್ಕಿಬೀಳುತ್ತಾನೆ,

ಪ್ರೇಮಿಗಳಿಗೂ ಈ ಸಲಹೆ ಪ್ರಯೋಜನವಾಗಬಲ್ಲದು.

ಪಾರ್ಕ್‌ಗಳಲ್ಲಿ ಮೂಗನ್ನು ಮುಂದೆ ಚಾಚಿಕೊಂಡು, ವಾಸನೆಯ ಜಾಡು ಹಿಡಿದು, ಮೈಬಣ್ಣ ಬದಲಿಸಿಕೊಂಡು, ನಡೆಯುವವರನ್ನು ಹೆಚ್ಚು ಹೆಚ್ಚು ಕಾಣಬಹುದು.

ಸಲಹೆ ನಂಬರ್ ನಾಲ್ಕು

ಮಾರ್ಜಾಲಗಳಿಗೆ ಕಾರ್ಗತ್ತಲಲ್ಲೂ ಲೋಕವನ್ನು ಚೆನ್ನಾಗಿ ಕಾಣಬಲ್ಲ ಶಕ್ತಿಯುತ ಕಣ್ಣುಗಳನ್ನು ನೀಡಿದ್ದೀಯೆ. ಇದೇ ರೀತಿಯ ಕಣ್ಣುಗಳನ್ನು ಮಾನವರಾದ ನಮಗೂ ನೀಡುವಂತವನಾಗು.

ಈ ಸಲಹೆ ನಮ್ಮ ಈ ಬಡ ದೇಶಕ್ಕೆ ಅತೀ ಹೆಚ್ಚಿನ ಲಾಭದಾಯಕವಾಗುವುದರಲ್ಲಿ ಯಾವ ಸಂಶಯವೂ ಇಲ್ಲ. ಹೇಗೆಂದರೆ ರಾತ್ರಿಯಲ್ಲಿ ಬೆಳಕಿಗಾಗಿ ಖರ್ಚಾಗುವ ವಿದ್ಯುಚ್ಛಕ್ತಿಯನ್ನು ಸಂಪೂರ್ಣವಾಗಿ ಉಳಿಸಿದ ದೇಶದ ಸಂಪತ್ತನ್ನು ಅಧಿಕಗೊಳಿಸಲು ಸಹಾಯಕವಾಗುತ್ತದೆ. ಕೆ.ಇ.ಬಿ. ಅವರಿಗಂತೂ ಈ ಸಲಹೆಯಿಂದ ಅತೀ ಹೆಚ್ಚಿನ ಸಹಾಯವಾಗಬಲ್ಲದು. ಡೇ ಅಂಡ್ ನೈಟ್ ಕ್ರಿಕೆಟ್ ಆಟವನ್ನು ಕತ್ತಲಲ್ಲೇ ನೋಡಿ ಆನಂದಿಸಬಹುದು.

''ಅಳಿಯನ ಕುರುಡು ಕತ್ತಲಾದಾಗ ಗೊತ್ತಾಗುತ್ತೆ'' ಅನ್ನೋ ಗಾದೆಯನ್ನು ನಿಜಗೊಳಿಸು ತಂದೆ.

ಮೇಲೆ ವಿವರಿಸಲ್ಪಟ್ಟಿರುವ ಸಲಹೆಗಳು ಮಾನವನಿಗೆ ಮಾತ್ರ ಸೀಮಿತವಾಗಿವೆ. ಆದರೆ ಈ ಕೆಳಕಂಡ ಸಲಹೆಗಳು ಕತ್ತೆ ಮತ್ತು ನವಿಲುಗಳಿಗೆ ಸಂಬಂಧ ಪಟ್ಟವುಗಳಾಗಿವೆ.

ಕತ್ತೆಯ ಬಗ್ಗೆ ಒಂದು ಸಲಹೆ

ಹೇ! ಬ್ರಹ್ಮದೇವನೆ ಕತ್ತೆಯಂತಹ ಮುಗ್ಧ ಪ್ರಾಣಿಯನ್ನು ಸೃಷ್ಟಿಸಿರುವುದಕ್ಕಾಗಿ ಧನ್ಯವಾದಗಳು.

ಕತ್ತೆಯ ಬಗ್ಗೆ ಹೇಳುವುದಾದರೆ, ಕತ್ತೆ ಬಲು ಕಷ್ಟ ಜೀವಿ. ಮಾನವನಿಗೆ ಹಲವಾರು ರೀತಿಯಲ್ಲಿ ನೆರವಾಗುವುದು. ಬೆನ್ನುಮೂಳೆ ಮುರಿದೀತು ಎನ್ನುವಷ್ಟು ಭಾರವನ್ನು ಹೇರಿಸಿಕೊಂಡು ಬೆಟ್ಟಗುಡ್ಡಗಳಲ್ಲಿ, ಕಾಡುಮೇಡುಗಲ್ಲಿ, ಊರು ಕೇರಿಗಳಲ್ಲಿ, ಚಳಿಗಾಳಿ, ಬಿಸಿಲು ಮಳೆಗಳನ್ನೂ ಲೆಕ್ಕಿಸದೆ ನಿಷ್ಠೆಯಿಂದ ತನ್ನ

ಒಡೆಯನಿಗೆ ಸೇವೆ ಸಲ್ಲಿಸುತ್ತದೆ. ಆದರೆ ಆ ನಿರ್ದಯಿ ಒಡೆಯನಾದರೋ ಈ ಪ್ರಾಣಿಗೆ ಪೌಷ್ಟಿಕ ಮತ್ತು ಸಮತೋಲನ ಆಹಾರವನ್ನು ಎಂದೂ ಕೊಡಲೊಲ್ಲನು. ಬದಲಿಗೆ ಈ ಬಡಪ್ರಾಣಿ ಗಲ್ಲಿ ಗಲ್ಲಿ ಅಲೆದಲೆದು, ಕಾಗದ, ಕಸಕಡ್ಡಿಗಳನ್ನೇ ಹೊಟ್ಟೆತುಂಬ ತಿಂದು, ಭಾರ ಹೊರಲು ಸಿದ್ಧನಾಗಿ ಮನೆಗೆ ಹಿಂತಿರುಗಬೇಕು.

ಇಷ್ಟಾದರೂ ಸ್ವಾರ್ಥಿಯಾದ ಮಾನವ ಈ ಪ್ರಾಣಿಯನ್ನು ತುಂಬಾ ನಿಕೃಷ್ಟವಾಗಿ ಕಾಣುತ್ತಾನೆ. ಶತಮೂರ್ಖರನ್ನು ಈ ಸಾಧುಪ್ರಾಣಿಗೆ ಹೋಲಿಸಿ ಅವಮಾನ ಮಾಡುತ್ತಾನೆ. ಕೆಲವು ಪೋಕರಿ ಬಾಲಕರಂತೂ ಮೋಜಿಗಾಗಿ ಇದರ ಬಾಲಕ್ಕೆ ಪಟಾಕಿ ಸರವನ್ನು ಕಟ್ಟಿ ಸ್ಫೋಟಿಸುವರು. ಇದರಿಂದ ಈ ಬಡಪ್ರಾಣಿಗೆ ಎಷ್ಟು ಹಿಂಸೆಯಾಗುತ್ತದೆ ಅನ್ನುವುದು ನಿನಗೆ ತಿಳಿಯದೇನು ಬ್ರಹ್ಮದೇವ?

ಕತ್ತೆಗೆ ಒದಗಿರುವ ಈ ದುಸ್ಥಿತಿಗೆ ಕಾರಣ ಅದಕ್ಕೆ ನೀನು ದಯಪಾಲಿಸಿರುವ ಆಕರ್ಷಕವಲ್ಲದ ಮೈಬಣ್ಣ ಮತ್ತು ಒಂದಿಷ್ಟೂ ಇಂಪಿಲ್ಲದ ಕಂಠಸಿರಿ. ಇಷ್ಟೇ ಸಾಲದು ಅಂತ, ಮೊದ್ದುತನವನ್ನೂ ಧಾರಾಳವಾಗಿ ಅನುಗ್ರಹಿಸಿದ್ದೀಯೆ.

ಈ ನ್ಯೂನತೆಗಳನ್ನು ಸರಿಪಡಿಸಲು ಕೆಲವು ಸಲಹೆಗಳನ್ನು ಈ ಕೆಳಗೆ ವಿವರಿಸಲಾಗಿದೆ.

(1) ಮೊಲಗಳಿಗೆ ಇರುವಂತಹ ಶ್ವೇತ ವರ್ಣವನ್ನೋ ಅಥವಾ ಮಾಯಾ ಮೃಗಕ್ಕೆ ಇತ್ತು ಅಂತ ಹೇಳಲಾಗಿರುವ ಚಿನ್ನದ ಹೊಳಪನ್ನೋ ದಯಪಾಲಿಸುವಂತವನಾಗು.

(2) ಒಂದು ಸಾರಿ ಕೇಳಿದರೆ, ಮತ್ತೂ ಮತ್ತೂ ಕೇಳಿ ಸವಿಯಬೇಕು ಅನ್ನುವಷ್ಟು ಇಂಪಾಗಿರುವ ಕಂಠ ಮಾಧುರ್ಯವನ್ನು ಅನುಗ್ರಹಿಸು.

(3) ಬಾಲಕರು ಯಾರಾದರೂ ಪಟಾಕಿ ಸರವನ್ನು ಕಟ್ಟಲು ಬಾಲವನ್ನು ಹಿಡಿಯ ಹೋದರೆ, ಬಾಲದ ಮೇಲೆಲ್ಲಾ ಚೂಪಾದ ಮುಳ್ಳುಗಳು (ಮುಳ್ಳು ಹಂದಿಗೆ ಕೊಟ್ಟಿರುವೆಯಲ್ಲಾ ಆ ರೀತಿಯದು) ತಕ್ಷಣ ನಿಗರಿಸಿ ನಿಲ್ಲುವಂತೆ ಅನುಗ್ರಹಿಸು.

(4) ಕೊನೆಯದಾಗಿ ನರಿಗಿರುವಂತೆ ಚುರುಕು ಬುದ್ಧಿಯನ್ನು ಕತ್ತೆಗೂ ಕೊಡುವವನಂತವನಾಗು.

ಈ ಸಲಹೆಗಳನ್ನು ಅಳವಡಿಸಿದ್ದೇ ಆದರೆ, ಕತ್ತೆ ಅತ್ಯಂತ ಪ್ರೀತಿಯ ಸಾಕು ಪ್ರಾಣಿ ಆಗುವುದರಲ್ಲಿ ಸಂಶಯವಿಲ್ಲ. ಸಾಕುಪ್ರಾಣಿ ಆದ ಕೂಡಲೇ ಅದಕ್ಕೆ

ವಿಟಮಿನ್ನುಗಳು, ಸಮತೋಲನ ಆಹಾರ, ಫಿಲ್ಟರ್ಡ್ ನೀರು, ಮಲಗಲು ಬೆಚ್ಚಗಿನ ಹಾಸಿಗೆ ಎಲ್ಲವೂ ಧಾರಾಳವಾಗಿ ಸಿಗುವಂತಾಗುತ್ತದೆ.

ಹೀಗೆ ಮಾರ್ಪಾಟಾದ ಕತ್ತೆಗೆ ಸಮಾಜದಲ್ಲಿ ಅತೀ ಹೆಚ್ಚಿನ ಘನತೆ, ಗೌರವ, ಪ್ರೀತಿ, ವಿಶ್ವಾಸಗಳು ದೊರೆಯುವುದರಲ್ಲಿ ಕಿಂಚಿತ್ ಸಂಶಯವೂ ಇಲ್ಲ. ಇದರ ಪರಿಣಾಮವಾಗಿ ವಿಶೇಷ ಸಂದರ್ಭಗಳಲ್ಲಿ ಪ್ರತಿಷ್ಠಿತರನ್ನು ಅಲಂಕರಿಸಿದ ಸುಂದರ ಕತ್ತೆಗಳ ಮೇಲೆ ಮೆರವಣಿಗೆ ಮಾಡಿ ಗೌರವಿಸುವ ವಾಡಿಕೆ ಬರುತ್ತೆ.


ನವಿಲಿಗೆ ಸಂಬಂಧಪಟ್ಟ ಒಂದು ಚಿಕ್ಕ ಸಲಹೆ

ನವಿಲು ಸುಂದರವಾದ ಪಕ್ಷಿ. ಇದು ನಮ್ಮ ರಾಷ್ಟ್ರದ ಪಕ್ಷಿ. ಸುಬ್ರಹ್ಮಣ್ಯದೇವರ ವಾಹನವೂ ಹೌದು. ಇದರಲ್ಲೂ ಒಂದು ಕೊರತೆಯನ್ನು ಇಟ್ಟಿದ್ದೀಯೆ. ಅದೇನೆಂದರೆ ಅದರ ಗಂಟಲಿನಿಂದ ಹೊರಬರುವ ಶಬ್ದ ಕರ್ಕಶ ಮತ್ತು ಅಮಂಗಳ. ಇದನ್ನು ಸರಿಪಡಿಸುವ ಸಲುವಾಗಿ ಈ ಸಲಹೆ ಕೊಡಲಾಗಿದೆ.

ಕೋಗಿಲೆಗೆ ನೀನು ಅನುಗ್ರಹಿಸಿರುವ ಮಧುರ ಇಂಚರವನ್ನು ನವಿಲಿಗೆ ವರ್ಗಾಯಿಸು. ಕೋಗಿಲೆಗೆ ಬೇರೆ ಯಾವುದಾದರು ರಾಗವನ್ನು ನೀಡು.

ಹೀಗೆ ಮಾಡಿದ್ದೇ ಆದರೆ ನವಿಲಿನ ಬೆಲೆ ಮತ್ತಷ್ಟು ಜಾಸ್ತಿ ಆಗುವುದರಲ್ಲಿ ಎರಡು ಮಾತಿಲ್ಲ.

ಈಗ ಸಧ್ಯಕ್ಕೆ ಇಷ್ಟು ಸಾಕಲ್ಲವೆ ಬ್ರಹ್ಮದೇವ?



ಅಲ್ಲಾವುದ್ದೀನ್ ಮತ್ತು ಅದ್ಭುತ ದೀಪ

– ಶಿವು

ಸಿದ್ದಯ್ಯ ರಸ್ತೆಯಲ್ಲಿ ಅಲ್ಲಾವುದ್ದೀನ್ ನಡೆದು ಹೋಗುತ್ತಿದ್ದ. ಅಕ್ಕಪಕ್ಕದಲ್ಲಿನ ಗರಾಜುಗಳಲ್ಲಿನ ಗಲಿಬಿಲಿಯ ಪರಿವೆಯೇ ಇಲ್ಲದೇ ನಡೆದು ಹೋಗುತ್ತಿದ್ದ ಅಲ್ಲಾವುದ್ದೀನನ ಪಾದ ಅಕಸ್ಮಾತ್ತಾಗಿ ದಾರಿಯಲ್ಲಿ ಅನಾಥವಾಗಿ ಬಿದ್ದಿದ್ದ ಕಾರಿನ ಹೆಡ್ಲೈಟ್ ಒಂದನ್ನು ಎಡವಿತು. ತಕ್ಷಣ, ಅವನ ಮುಂದೆ ಭೂತವೊಂದು ಪ್ರತ್ಯಕ್ಷವಾಯಿತು. ಪ್ರೈಮರಿ ಶಾಲೆಯಲ್ಲಿ ಅರೇಬಿಯಾದ ಅಲ್ಲಾವುದ್ದೀನನ ಕಥೆಯನ್ನು ಓದಿದ್ದ ಅವನಿಗೆ ಭೂತವನ್ನು ನೋಡಿ ಆಶ್ಚರ್ಯವೇನೂ ಆಗಲಿಲ್ಲ. ''ಮೂರು ವರಗಳನ್ನ ಕೊಡ್ತೀಯಾತಾನೇ'' ಅಂತ ಭೂತವನ್ನ ಧೈರ್ಯದಿಂದ ಕೇಳಿದ ಅಲ್ಲಾವುದ್ದೀನ್.

''ನೀನು ನನ್ನನ್ನ ಈ ದೀಪದ ಸೆರೆಯಿಂದ ಬಿಡಿಸಿದ್ದೇನೋ ನಿಜ. ಹಾಗೆಂದ ಮಾತ್ರಕ್ಕೆ ನಾನು ನನ್ನ ಪೂರ್ವಜರತರಹ ನೀನು ಹೇಳಿದ್ದನ್ನೆಲ್ಲಾ ನಡೆಸಿಕೊಡಬೇಕೆಂದು ಯಾವ ಕಾನೂನು ಹೇಳಿಲ್ಲ. ಒಂದು ವರ ಕೊಡ್ತೇನೆ. ಏನು ಬೇಕಾದ್ರೂ ಕೇಳಿಕೋ'' ಅಂತ ಭೂತ ಸ್ವಲ್ಪ ಗತ್ತಿನಿಂದಾನೇ ಹೇಳಿತು.

ಅಲ್ಲಾವುದ್ದೀನ್ ಯೋಚಿಸಿದ. ಚೆನ್ನಾಗಿ ಯೋಚಿಸಿದ. ಆಮೇಲೆ ''ನೋಡು ಭೂತ, ದಿನಾಲೂ ನಾನು ಇಲ್ಲಿಂದ ಫ್ರೇಜರ್ ಟೌನಿಗೆ ನನ್ನ ಕೆಲಸಕ್ಕೆ ಹೋಗಬೇಕು. ಬೆಂಗಳೂರಿನಲ್ಲಿ ಈಗಿರುವ ವಾಹನ ಸಂಚಾರ ದಟ್ಟವಾಗಿರೋದರಿಂದ ದಿನಾ ಬೆಳಿಗ್ಗೆ ಒಂದೂವರೆ ಘಂಟೆ ಆಗುತ್ತೆ ನಾನು ನನ್ನ ಆಫೀಸ್ ಸೇರಬೇಕಾದರೆ. ನೀನು ನನಗೋಸ್ಕರ ಈ ಕ್ಷಣವೇ ಇಲ್ಲಿಂದ ಫ್ರೇಜರ್ ಟೌನಿಗೆ ಒಂದು ಫ್ಲೈ ಓವರ್ ನಿರ್ಮಿಸಿಕೊಟ್ಟರೆ ಬಹಳ ಅನುಕೂಲ'' ಅಂದ ಅಲ್ಲಾವುದ್ದೀನ್.

ಭೂತ ಜೋರಾಗಿ ಗಹಗಹಿಸಿ ನಗುಕ್ಕೆ ಶುರು ಮಾಡಿತು. ''ಯಾವ ಕಾಲದಲ್ಲಿದ್ದೀಯಾ ನೀನು ಅಲ್ಲಾವುದ್ದೀನ್? ಇದೇನು ಹೈದರಾಬಾದ್ ಅಂದ್ಕೊಂಡು ಬಿಟ್ಟಿದೀಯಾ? ಸಿದ್ದಯ್ಯ ರಸ್ತೆಯಿಂದ ಫ್ರೇಜರ್ ಟೌನಿಗೆ ಫ್ಲೈ ಓವರ್ ಹಾಕಬೇಕಾದರೆ ಹತ್ತು ಕಿಲೋಮೀಟರ್ ಆಗುತ್ತೆ. ಅಷ್ಟು ದೂರದ ನಡುವೆ ಭೂ ಸ್ವಾಧೀನದ ಕೆಲಸ. ಅದಕ್ಕೆ ಇದಿರಾಗುವ ಸ್ಟೇ ಆರ್ಡರ್‌ಗಳು, ಅದಕ್ಕೆ ಬೇಕಾಗೋ ಸಿಮೆಂಟೂ, ಸ್ಟೀಲು, ಕಂಟ್ರಾಕ್ಟರುಗಳು, ಮಂತ್ರಿಗಳಿಗೆ ಕೊಡಬೇಕಾದ ಮಾಮೂಲು ಇದನ್ನೆಲ್ಲಾ ನಿಭಾಯಿಸೋದು ತಮಾಷೆ ಅಲ್ಲ. ಬೇರೆ ಏನಾದರೂ ವರ ಕೇಳು'' ಅಂತು ಭೂತ.

ಅಲ್ಲಾವುದ್ದೀನ್ ಮತ್ತೆ ಯೋಚಿಸಲು ಪ್ರಾರಂಭಿಸಿದ. ಆನಂತರ ''ನನಗೆ ಮದುವೆಯಾಗಿ ಐದು ವರ್ಷಗಳಾಗಿವೆ. ಆದರೂ ನನ್ನ ಹೆಂಡತಿ ನನ್ನನ್ನ ಯಾವಾಗಲೂ ಶತ ಒರಟ, ಒಂದು ಚೂರೂ ಸಂವೇದನೇನೇ ಇಲ್ಲ, ಅಂತ ಬಯ್ತಾನೇ ಇರ್ತಾಳೆ. ಅವಳ ಮನಸ್ಸಿನಲ್ಲಿ ಏನು ಆಗ್ತಾ ಇದೆ ಅಂತ ಅರ್ಥಾನೇ ಆಗೋದಿಲ್ಲ. ಒಮ್ಮೊಮ್ಮೆ ಅವಳು ಸುಮ್ಮನೆ ಆಗಿದ್ದಾಗ ಯಾವುದೋ ಕಾರಣಕ್ಕೆ ಅವಳ ಮನಸ್ಸು ಒಳಗೆ ಕುದೀತಾ ಇರುತ್ತೆ. ಅವಳು ಅಳುತ್ತಿರುವಾಗ, 'ನನಗೇನೂ ಬೇಡ' ಅಂತ ಕೋಪದಿಂದ ಹೇಳುವಾಗ ನಿಜವಾಗಿ ಅವಳ ಮನದಲ್ಲಿ ಏನಿದೆ ಅಂತ...''

ಭೂತ ಅವನ ಮಾತನ್ನು ಅರ್ಧಕ್ಕೆ ತುಂಡರಿಸಿ, ಹೀಗೆಂದಿತು.

''ಫ್ಲೈಓವರ್‌ಗೆ ಡಬ್ಬಲ್ ಲೇನಿರಬೇಕೋ, ಸಿಂಗಲ್ ಲೇನೇ ಸಾಕೋ?''

★★★



ಕಾರ್ಗಿಲ್ ಖದೀಮರನ್ನು ಓಡ್ಸೋ ವರ್ಗೂ ನಿನಗೆ ಸಿನಿಮಾ
ಇಲ್ಲ ಅಂತ ರಾಮೂಗೆ ಖಡಾಖಂಡಿತವಾಗಿ ಹೇಳ್ಬಿಟ್ಟೇರೀ



ಶ್ರೀಮತಿ ಶಾಂತಾ ಮತ್ತು ಶ್ರೀ ಸಿ. ಆರ್. ರಘು

ಇವರ ಸವಿನೆನಪಿಗೆ

ಪೂರ್ಣಿಮಾ ರಘು ಗೌಡ – ಸುಧೀರ್‌ಗೌಡ

ಶ್ರೀಹರಿ ಕಡಾಂಬಿ.

ಮೋಹಕ, ಸುಂದರ ಹಾಗೂ ಆಕರ್ಷಣೀಯ ಸ್ವರ್ಣ ಕ್ವಾರ್ಟ್ಸ್ ಗಡಿಯಾರಗಳು ಎಚ್‌ಎಮ್‌ಟಿಯವರಿಂದ. ಕಂಗೊಳಿಸುವ ಗೋಲ್ಡ್ ಪ್ಲೇಟೆಡ್‌ನೊಂದಿಗೆ, ನಿಮಗಾಗಿ ಕೇವಲ ರೂ. 555/- ಕ್ಕೆ!

ಇದಲ್ಲದೆ, ಎಚ್‌ಎಮ್‌ಟಿಯ ಬೃಹತ್ ಶ್ರೇಣಿಯಲ್ಲಿ ಆಟೋಮ್ಯಾಟಿಕ್ ಹಾಗೂ ಮೆಕ್ಯಾನಿಕಲ್ ಕೈಗಡಿಯಾರಗಳು ಎಲ್ಲರ ಕೈಗೆ ಎಟುಕುವ ಬೆಲೆಗಳಲ್ಲಿ, ವಿವಿಧ ಶೈಲಿಗಳಲ್ಲಿ ದೊರೆಯುತ್ತವೆ.

ಒಂದು ಸುಂದರ ಗೋಲ್ಡ್ ಪ್ಲೇಟೆಡ್ ಗಡಿಯಾರ ಕೇವಲ ರೂ. 555/-ಕ್ಕೆ



Swarna QUARTZ from hmt

ಹೆಚ್ಚಿನ ವಿವರಗಳಿಗೆ ಈ ಕೂಪನ್‌ನ್ನು ಭರ್ತಿ ಮಾಡಿ ಇವರಿಗೆ ಕಳುಹಿಸಿ.
ದಿ ಜನರಲ್ ಮಾರ್ಕೆಟಿಂಗ್ ಮ್ಯಾನೇಜರ್ (ಗಡಿಯಾರಗಳು),
ಎಚ್‌ಎಮ್‌ಟಿ ಲಿಮಿಟೆಡ್, 59, ಬಳ್ಳಾರಿ ರಸ್ತೆ, ಬೆಂಗಳೂರು-560 032
ದೂರವಾಣಿ: 3335032 ಫ್ಯಾಕ್ಸ್: 3338950

* ಗರಿಷ್ಠ ಮಾರಾಟ ಬೆಲೆ
ನಗದು ಖರೀದಿಯ ಮೇಲೆ ವಿಶೇಷ ರಿಯಾಯಿತಿ

ಹೌದು, ನಾನು ಎಚ್‌ಎಮ್‌ಟಿ ಗಡಿಯಾರಗಳನ್ನು ಖರೀದಿಸಲು ಬಯಸುತ್ತೇನೆ. ದಯವಿಟ್ಟು ನಿಮ್ಮ ಸೇಲ್ಸ್ ಎಕ್ಸಿಕ್ಯೂಟಿವ್ ಅವರನ್ನು ಕಳುಹಿಸಿಕೊಡಿ

ಹೆಸರು ______________________ ವಿಳಾಸ : ______________________

ಸಂಸ್ಥೆ ______________________ ಹುದ್ದೆ : ______________ ದೂರವಾಣಿ : ______________

MASS HMT 126

Printed by V.R. NATH for the Publisher M. SHIVAKUMAR, Published and owned by M. SHIVA KUMAR, 36, 6th Main Road, Malleswaram Bangalore - 560 003.
Printed at RAVI GRAPHICS, 62, 4th Cross, SSI Area, Rajajinagar, Bangalore 560 010
Editor : M. SHIVAKUMAR